ಶ್ರೀ ರಾಮಾನುಜ ಭಾರತಿ

ಶ್ರೀರಾಮಾನುಜ ಜನಪ್ರಿಯ ಕೃತಿಮಾಲೆ - ೫

ಭೂಮ ವಿದ್ಯಾ



ಪ್ರಕಾಶಕರು

ಶ್ರೀರಾಮಾನುಜ ಸೇವಾ ಟ್ರಸ್ಟ್, ಬೆಂಗಳೂರು.

ಶ್ರೀರಾಮನುಜ ಭಾರತಿ
ಶ್ರೀರಾಮಾನುಜ ಜನಪ್ರಿಯ ಕೃತಿಮಾಲೆ - ೫
ಛಾಂದೋಗ್ಯ ಉಪನಿಷತ್
ಏಳನೆಯ ಪ್ರಪಾಠಕ

ಭೂಮ ವಿದ್ಯಾ

ಅನುವಾದ ಮತ್ತು ವಿವರಣೆ
ವೇದಾಂತ ವಿದ್ವಾನ್
ಡಾ|| ಎನ್.ಎಸ್. ಅನಂತ ರಂಗಾಚಾರ್ಯ

ಪ್ರಕಾಶಕರು
ಶ್ರೀ ರಾಮಾನುಜ ಸೇವಾ ಟ್ರಸ್ಟ್
ಬೆಂಗಳೂರು

Bhumavidya - Seventh Prapataka of
Chandogya Upanisad - Kannada Translation
by Dr. N.S. Anantha Rangacharya.

First Edition 1993

Price Rs. 8/-

© **Sri Ramanuja Seva Trust**
151, Adarsha Bhavan,
15th Cross, Malleswaram
Bangalore - 560 055
Phone : 340153/342224

Printed at
Lotus Printers
Industrial Town, Rajajinagar
Bangalore - 44

ಅರಿಕೆ

ನಮ್ಮ ದೇಶದ ವಿಖ್ಯಾತ ಸಂತರು ಮತ್ತು ದಾರ್ಶನಿಕರಲ್ಲಿ ಭಗವದ್ರಾಮಾನುಜರು ಒಬ್ಬರು. ವಿಶಿಷ್ಟಾದ್ವೈತ ಸಂಪ್ರದಾಯದ ಪ್ರವರ್ತನ ಮಾಡಿದ ಮಹಾನುಭಾವರು ಇವರು. ಉಪನಿಷತ್ತುಗಳು ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳ ಉಪದೇಶವನ್ನು ಮಂಜುಳತರವಾಗಿ ಪ್ರತಿಪಾದಿಸಿದರು ಇವರು. ಸರ್ವ ಶ್ರುತಿಗಳಿಗೂ ಮುಖ್ಯಾರ್ಥವನ್ನು ನಿರೂಪಿಸಿ ಸರ್ವಶ್ರುತಿ ಸಾಮಂಜಸ್ಯವನ್ನು ಸ್ಥಾಪಿಸಿದರು. ರಾಮಾನುಜರು ಶ್ರುತಿಗಳ ಸಾರಸರ್ವಸ್ವವನ್ನು ಪೂರ್ಣದೃಷ್ಟಿಯಿಂದ ನಿರೂಪಿಸಿದರು.

ಭಗವದ್ರಾಮಾನುಜರು ''ದಯೈಕ ಸಿಂಧು'' ಆದವರು. ಭಕ್ತಿ ಪ್ರಪತ್ತಿಗಳು ಮೋಕ್ಷೋಪಾಯವೆಂದು ಘೋಷಿಸಿದರಿವರು. ಪ್ರಪತ್ತಿ ಸಿದ್ಧಾಂತವನ್ನು ಪ್ರವರ್ತನಗೊಳಿಸಿ ಯಾವ ಭೇದವೂ ಇಲ್ಲದೇ ಎಲ್ಲರೂ ಮೋಕ್ಷವನ್ನು ಪಡೆಯಬಹುದೆಂದು ಸಾರಿ ಮೋಕ್ಷಕ್ಕೆ ಹೆದ್ದಾರಿ ಒಂದನ್ನು ತೆರೆದರಿವರು. ಭಗವದ್ರಾಮಾನುಜರ ಉಪದೇಶಗಳು ಸಾರ್ವಕಾಲಿಕವಾಗಿ ಎಲ್ಲ ಮಾನವ ಕೋಟಿಗೆ ಅನ್ವಯಿಸುವುವಾಗಿವೆ.

ಶ್ರೀರಾಮಾನುಜ ಜನಪ್ರಿಯ ಗ್ರಂಥ ಮಾಲೆಯು ಈ ಮಹಾಸಂತರ ಉಪದೇಶವನ್ನು ಸಾಮಾನ್ಯ ಜನರಿಗೆ ತಿಳಿಯಪಡಿಸುವ ಉದ್ದೇಶ ಹೊಂದಿದೆ. ಈ ಮಾಲೆಯಲ್ಲಿ ಈ ಸಿದ್ಧಾಂತದ ಕೃತಿರತ್ನಗಳನ್ನೂ, ಸಿದ್ಧಾಂತಗಳನ್ನೂ ಸುಲಭವಾದ ಶೈಲಿಯಲ್ಲಿ ಜನ ಸಾಮಾನ್ಯರಿಗೆ ತಿಳಿಸಿಕೊಡುವ ಹಂಬಲವಿದೆ. ಇದರ ಪ್ರಯೋಜನವನ್ನು ಮಹಾಜನರು ಪಡೆದುಕೊಳ್ಳಬೇಕೆಂದು ಆಶಿಸುತ್ತೇವೆ.

ಪ್ರಕಾಶಕರು

ಶ್ರೀಮುಖ ಸಂವತ್ಸರ
ಆಷಾಡಶುದ್ಧ ಅಷ್ಟಮಿ

ಮೊದಲ ಮಾತು

ಈ ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನವಾದವು ವೇದಗಳು. ವೇದಗಳು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ ಎಂದು ನಾಲ್ಕು ರೂಪಗಳಲ್ಲಿವೆ. ಈ ಒಂದೊಂದು ವೇದದಲ್ಲಿಯೂ ಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂಬ ಭಾಗಗಳು ಇವೆ. ಉಪನಿಷತ್ತುಗಳು ವೇದಾನ್ತಗಳು ಎಂದು ವಿಖ್ಯಾತವಾಗಿವೆ. ಇವು ವೇದದ ಕೊನೆಯ ಭಾಗಗಳೂ ಹೌದು; ವೇದಗಳ ಸಾರತಮವಾದ ಸಿದ್ಧಾನ್ತಗಳನ್ನು ಒಳಗೊಂಡಿರುವುವೂ ಹೌದು. ಈ ಉಪನಿಷತ್ತುಗಳು ವೇದಾನ್ತ ದರ್ಶನಕ್ಕೆ ಪರಮಾಧಾರಗಳಾಗಿವೆ.

ಉಪನಿಷತ್ತುಗಳಲ್ಲಿ ಪರಬ್ರಹ್ಮದ ಸ್ವರೂಪವನ್ನೂ, ಜೀವಾತ್ಮನ ಸ್ವರೂಪವನ್ನೂ ಆ ಪರಬ್ರಹ್ಮವನ್ನು ಪಡೆಯಲು ಅನುಸರಿಸಬೇಕಾದ ಉಪಾಸನೆಗಳ ಸ್ವರೂಪವನ್ನೂ ಉಪದೇಶಿಸಲಾಗಿದೆ. ಜಗತ್ತಿಗೆ ಸರ್ವವಿಧ ಕಾರಣವಾಗಿ ಸಕಲ ಚೇತನಾಚೇತನ ಪದಾರ್ಥಗಳಿಗೆ ಅಂತರ್ಯಾಮಿಯಾಗಿ ಇರುವ ಪರಬ್ರಹ್ಮ ವಸ್ತುವಾದ ಶ್ರೀಮನ್ನಾರಾಯಣನನ್ನು ಉಪನಿಷತ್ತುಗಳು ಅನೇಕ ಶ್ರೀನಾಮಗಳಿಂದ ಕೊಂಡಾಡುತ್ತವೆ. ಅವನನ್ನು ಆತ್ಮಾ, ಸತ್, ಜ್ಯೋತಿ, ದಹರ, ಬ್ರಹ್ಮ, ಆಕಾಶ, ಪ್ರಾಣ, ಭೂಮ ಇತ್ಯಾದಿ ಅನೇಕ ಹೆಸರುಗಳಿಂದ ಕೊಂಡಾಡಿ ಅವನನ್ನು ಉಪಾಸನೆ ಮಾಡುವುದರಿಂದಲೇ ಪರಮಪುರುಷಾರ್ಥದ ಲಾಭ ಆಗುವುದೆಂದೂ ಅಮೃತತ್ವದ ಪ್ರಾಪ್ತಿ ಉಂಟಾಗುವುದೆಂದೂ ಉಪನಿಷತ್ತುಗಳು ಬಗೆಬಗೆಯಾಗಿ ತಿಳಿಸಿಕೊಡುತ್ತವೆ. ಈ ಎಲ್ಲ ನಾಮಗಳೂ ಏಕಮೇವಾದ್ವಿತೀಯನಾದ ಆ ಶ್ರೀಮನ್ನಾರಾಯಣನನ್ನೇ ಬೋಧಿಸುತ್ತವೆ ಎಂಬುದು ಬ್ರಹ್ಮವಾದಿಗಳ ಸಿದ್ಧಾನ್ತ. ಜಗತ್ತಿನ ಹುಟ್ಟಿಗೂ, ಸ್ಥಿತಿಗೂ, ಸಂಹಾರಕ್ಕೂ ಯಾವುದು ಕಾರಣವೋ ಅದೇ ಬ್ರಹ್ಮ. ಬ್ರಹ್ಮ ಶಬ್ದವು - ಸ್ವರೂಪದಿಂದಲೂ ಗುಣದಿಂದಲೂ ಯಾವುದು ಅತ್ಯಂತ ಬೃಹತ್ತಾದುದೋ ಅದನ್ನು ಬೋಧಿಸುತ್ತದೆ -- ''ಬೃಹತ್ತ್ವಾತ್ ಬೃಂಹಣತ್ವಾಚ್ಚ''.

ಉಪನಿಷತ್ತುಗಳಲ್ಲಿ ಪರಬ್ರಹ್ಮೋಪಾಸನೆಯ ಅನೇಕ ಪ್ರಕಾರಗಳನ್ನು ಉಪದೇಶಿಸಿದೆ. ಈ ಉಪಾಸನೆಗಳು ಮೂವತ್ತೆರಡು ಬಗೆಯಾಗಿ ಇವೆ. ಸದ್ವಿದ್ಯೆ, ದಹರವಿದ್ಯೆ, ವೈಶ್ವಾನರವಿದ್ಯೆ, ಸಂವರ್ಗವಿದ್ಯೆ, ಶಾಂಡಿಲ್ಯವಿದ್ಯೆ, ಭೂಮವಿದ್ಯೆ, ಪುರುಷವಿದ್ಯೆ, ಅಕ್ಷಿಪುರುಷವಿದ್ಯೆ, ಆದಿತ್ಯಪುರುಷವಿದ್ಯೆ, ಪ್ರಾಣವಿದ್ಯೆ -- ಹೀಗೆ ವಿಧವಿಧವಾಗಿರುವ ಈ ಉಪಾಸನೆಗಳಿಗೆಲ್ಲಾ ಉಪಾಸ್ಯವಾದ ವಸ್ತು ಒಂದೇ. ಆದುದರಿಂದ ಈ ಬೇರೆ ಬೇರೆ ಉಪಾಸನೆಗಳಲ್ಲಿ ಅವರವರ ಅಧಿಕಾರಾನುಗುಣವಾಗಿ ಯಾವುದಾದರೂ ಒಂದು ಉಪಾಸನಾ ಮಾರ್ಗವನ್ನು ಆರಿಸಿಕೊಂಡು ಅದನ್ನು ಅನುಷ್ಠಿಸಬೇಕೆಂಬುದು ಉಪನಿಷತ್ತಿನ ಉಪದೇಶ.

ಅನಾದಿಯಾದ ಕರ್ಮದ ಕಾರಣ, ಸಂಸಾರದಲ್ಲಿ ಮಗ್ನರಾಗಿರುವ ಚೇತನನು ಈ ಹುಟ್ಟು ಸಾವುಗಳ ತಿರುಗಣೆಯಿಂದ ಪಾರಾಗಿ ನಿರತಿಶಯವಾದ ಆನಂದವನ್ನು ಪಡೆದುಕೊಂಡು ಪರಮಾತ್ಮನ ದಿವ್ಯಾನುಭವವನ್ನು ಪಡೆದುಕೊಳ್ಳಬೇಕಾದರೆ ಉಪಾಸನೆಯನ್ನು ಮಾಡಬೇಕು. ಪರಮಾತ್ಮನನ್ನು ಅವನು ಇರುವಂತೆ ತಿಳಿದು ನಿರಂತರವಾಗಿ ಅವನ ಧ್ಯಾನದಲ್ಲಿ ತೊಡಗಬೇಕು. ಉಪಾಸನೆಯು ಭಗವನ್ನನಲ್ಲಿ ತೋರುವ ನಿರತಿಶಯವಾದ ಪ್ರೇಮರೂಪವಾದುದು. ಇದನ್ನು ದಿನದಿನವೂ ಎಡೆಬಿಡದೆ ಫಲಪ್ರಾಪ್ತಿಯಾಗುವವರೆಗೂ ಮಾಡಬೇಕು. ಈ ಉಪಾಸನೆಯು ಸಿದ್ಧಿಸಬೇಕಾದರೆ ಸಾಧಕನು ತನ್ನ ವರ್ಣಾಶ್ರಮಕ್ಕೆ ವಿಧಿಸಿರುವ ನಿತ್ಯ - ನೈಮಿತ್ತಿಕಾದಿ ಕರ್ಮಗಳನ್ನು ಭಗವದಾರಾಧನರೂಪವಾಗಿ, ಫಲದಲ್ಲಿ ಆಶೆ ಇಲ್ಲದವನಾಗಿ, ತನ್ನ ಆತ್ಮ ಸ್ವರೂಪದ ಜ್ಞಾನಾನುಸಂಧಾನದೊಡನೆ ಮಾಡಬೇಕು.

ಒಂದೊಂದು ಉಪಾಸನೆಯಲ್ಲಿಯೂ ಪರಮಾತ್ಮನ ಒಂದೊಂದು ವಿಶಿಷ್ಟವಾದ ಗುಣದ ಅನುಸಂಧಾನ ಆಗುತ್ತದೆ. ದಹರ ವಿದ್ಯೆಯಲ್ಲಿ ತನ್ನ ಹೃದಯದಲ್ಲಿರುವ ಆಕಾಶದ ರೂಪದಲ್ಲಿ ಸಕಲ ಕಲ್ಯಾಣ ಗುಣಗಳೊಡನೆ ಕೂಡಿದಂತೆ ಪರಮಾತ್ಮನನ್ನು ಉಪಾಸಿಸುತ್ತಾನೆ. ಅಕ್ಷಿ ವಿದ್ಯೆಯಲ್ಲಿ ತನ್ನ ಬಲಗಣ್ಣಿನಲ್ಲಿ ಯಾವ ಪುರುಷನು ತೋರಿ ಬರುತ್ತಾನೆಯೋ ಅವನನ್ನು ಆ ರೀತಿಯಲ್ಲಿ ಉಪಾಸನೆ ಮಾಡಬೇಕು. ಹೀಗೆ ಒಂದೊಂದು ವಿದ್ಯೆ ಅಥವಾ

ಉಪಾಸನೆಗೆ ಒಂದೊಂದು ನಿರ್ದಿಷ್ಟವಾದ ಲಕ್ಷಣ ಇದೆ. ಈ ವಿಶಿಷ್ಟವಾದ ಗುಣವನ್ನು ಉಪಾಸನೆ ಮಾಡುವಾಗ ಸಾಧಕನು ಪರಮಾತ್ಮನ ಸ್ವರೂಪ ನಿರೂಪಕ ಧರ್ಮಗಳಾದ ಸತ್ಯತ್ವ, ಜ್ಞಾನತ್ವ, ಅನನ್ತತ್ವ, ಆನನ್ದತ್ವ, ಅಮಲತ್ವ ಮೊದಲಾದ ಗುಣಗಳೊಡನೆಯೇ ಅನುಸಂಧಾನ ಮಾಡಬೇಕು. ಭಾವನಾಪ್ರಕರ್ಷದಿಂದ ಈ ಗುಣವಿಶೇಷಗಳಿಂದ ದರ್ಶನ ಸಮಾನಾಕಾರವಾಗಿರುವಂತೆ ಭಾವಿಸಿ ಉಪಾಸನೆ ಮಾಡಿದಾಗ ಕೊನೆಗೆ ಉಪಾಸ್ಯವಾದ ಬ್ರಹ್ಮವು ದರ್ಶನಸಮಾನಾಕಾರಪನ್ನವಾಗುವುದು. ಪರಮಾತ್ಮನ ಸಾಕ್ಷಾತ್ಕಾರ ಹೀಗೆ ಉಪಾಸನೆಯಿಂದ ಸಾಧ್ಯವಾಗುತ್ತದೆ. ಭಗವನ್ತನು ಇಂತಹ ಉಪಾಸನೆಗೆ ಒಲಿದು ಅನುಗ್ರಹಿಸುತ್ತಾನೆ. ಅವನ ಅನುಗ್ರಹ ಅಥವಾ ಪ್ರಸಾದವೇ ಮೋಕ್ಷಕ್ಕೆ ಕಾರಣ. ಅವನ ಪ್ರಸಾದವನ್ನು ಪಡೆದುಕೊಳ್ಳುವುದಕ್ಕಾಗಿ ಮಾಡುವ ವ್ಯಾಜ ಈ ಉಪಾಸನೆ.

ಉಪನಿಷತ್ತುಗಳಲ್ಲಿ ಹೇಳಿರುವ ಉಪಾಸನ, ಧ್ಯಾನ, ವೇದನ, ಭಕ್ತಿ ಮೊದಲಾದ ಶಬ್ದಗಳೆಲ್ಲವೂ ಸಮಾನಾರ್ಥಕವಾಗಿವೆ. ಉಪಾಸನೆಯನ್ನು ನಿರೂಪಿಸುವಾಗ ಆಚಾರ್ಯರು ''ತೈಲಧಾರಾವತ್ ಅವಿಚ್ಛಿನ್ನ - ಸ್ಮೃತಿ ಸಂತತಿರೂಪಾ'' ಎಂದು ನಿರೂಪಿಸುತ್ತಾರೆ. ಭಗವನ್ತನನ್ನು ಅವನ ಕಲ್ಯಾಣ ಗುಣಗಳೊಡನೆ ನಿರಂತರವಾಗಿ ಧ್ಯಾನ ಮಾಡುವುದೇ ಉಪಾಸನೆ.

ಛಾಂದೋಗ್ಯೋಪನಿಷತ್ತಿನಲ್ಲಿ ಭಗವದುಪಾಸನೆಯ ಅನೇಕ ಪ್ರಕಾರಗಳನ್ನು ಉಪದೇಶಿಸಿದೆ. ಅಂತರಾದಿತ್ಯ ವಿದ್ಯೆ, ಅಕ್ಷಿ ಪುರುಷ ವಿದ್ಯೆ, ಆಕಾಶ ವಿದ್ಯೆ - ಇವು ಮೊದಲನೆಯ ಪ್ರಪಾಠಕದಲ್ಲಿ ಬಂದಿವೆ. ಮೂರನೆಯ ಅಧ್ಯಾಯದಲ್ಲಿ ಮಧು ವಿದ್ಯೆ, ಪುರುಷ ವಿದ್ಯೆಗಳು; ನಾಲ್ಕನೆಯ ಅಧ್ಯಾಯದಲ್ಲಿ ಸಂವರ್ಗ ವಿದ್ಯೆ, ಷೋಡಶಕಲಾ ವಿದ್ಯೆ, ಉಪಕೋಸಲ ವಿದ್ಯೆ ಮೊದಲಾದವು; ಐದನೆಯ ಅಧ್ಯಾಯದಲ್ಲಿ ಪಂಚಾಗ್ನಿ ವಿದ್ಯೆ, ವೈಶ್ವಾನರವಿದ್ಯೆಗಳು; ಆರನೆಯ ಅಧ್ಯಾಯದಲ್ಲಿ ಸದ್ವಿದ್ಯೆಯೂ, ಏಳನೆಯ ಅಧ್ಯಾಯದಲ್ಲಿ ಭೂಮ ವಿದ್ಯೆಯೂ, ಎಂಟನೆಯ ಅಧ್ಯಾಯದಲ್ಲಿ ದಹರ ವಿದ್ಯೆಯೂ ಪ್ರಸ್ತುತವಾಗಿವೆ. ಬ್ರಹ್ಮಸೂತ್ರದಲ್ಲಿ ನಿರೂಪಿಸಿರುವ

ಬ್ರಹ್ಮೋಪಾಸನಪ್ರಕಾರದಲ್ಲಿ ಛಾಂದೋಗ್ಯೋಪನಿಷತ್ತಿನಿಂದ ತೆಗೆದು ಕೊಂಡಿರುವ ಉಪಾಸನೆಗಳ ಸಂಖ್ಯೆ ಗಮನಾರ್ಹವಾಗಿದೆ.

ಬ್ರಹ್ಮೋಪಾಸನೆಯನ್ನು ಪ್ರಸ್ತುತಪಡಿಸುವಾಗ ಉಪನಿಷತ್ತು ಒವ್ವೊಮ್ಮೆ ಕೆಲವು ಆಖ್ಯಾಯಿಕೆಗಳನ್ನು ಪ್ರಸ್ತಾಪಿಸುತ್ತದೆ. ಈ ಆಖ್ಯಾಯಿಕೆಗಳು ವಿದ್ಯಾಸ್ತುತಿಗಾಗಿಯೂ ಮತ್ತು ಪ್ರರೋಚನಾರ್ಥ್ ವಾಗಿಯೂ ಬಂದಿವೆ.

ಇಲ್ಲಿ ಪ್ರಸ್ತುತವಾದ 'ಭೂಮ ವಿದ್ಯೆ' ಛಾಂದೋಗ್ಯೋಪನಿಷತ್ತಿನ ಏಳನೆಯ ಪ್ರಪಾಠಕವಾಗಿದೆ. ಈ ವಿದ್ಯೆಯ ಉಪದೇಶ ನಾರದ ಸನತ್ಕುಮಾರರ ಸಂವಾದರೂಪವಾಗಿ ಬೆಳೆದಿದೆ.

ನಾರದರು ಅನೇಕ ವಿದ್ಯೆಗಳಲ್ಲಿ ಪಾರಂಗತರಾಗಿದ್ದರು. ಪರಬ್ರಹ್ಮ ಜ್ಞಾನದಲ್ಲಿ ನಿಷ್ಠರಾಗಿ ಇರದೇ ಇದ್ದ ಕಾರಣ ಶೋಕಾರ್ಣವದಲ್ಲಿ ಪತಿತರಾಗಿ ಆ ಬ್ರಹ್ಮಜ್ಞಾನವನ್ನು ಉಪದೇಶಿಸಬಲ್ಲ ಗುರುವಿನ ಬಳಿ ಎಂದರೆ ಸನತ್ಕುಮಾರರ ಬಳಿ ಬಂದು ಅದಕ್ಕಾಗಿ ಪ್ರಾರ್ಥಿಸುತ್ತಾರೆ. ನಾರದರು ಶಬ್ದ ಬ್ರಹ್ಮ ನಿಷ್ಠರಾಗಿದ್ದರು. ಮಂತ್ರಗಳನ್ನು ಪ್ರಧಾನವಾಗಿ ಉಳ್ಳ ಕರ್ಮನಿಷ್ಠರಾಗಿದ್ದರು. ಆದರೆ ಪರಬ್ರಹ್ಮನಿಷ್ಠರಾಗಿರಲಿಲ್ಲ. ಬ್ರಹ್ಮೋಪದೇಶವನ್ನು ಪಡೆದುಕೊಳ್ಳಲು "ತದ್ವಿಜ್ಞಾನಾರ್ಥಂ ಗುರು ಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ "ಎಂದು ಹೇಳಿರುವಂತೆ ಗುರುಗಳನ್ನು ಆಶ್ರಯಿಸಿದರು. ಆಚಾರ್ಯೋಪದೇಶದಿಂದಲೇ ತತ್ತ್ವಜ್ಞಾನದ ಪ್ರಾಪ್ತಿ. ಆ ಗುರುಗಳು ಉಪದೇಶಿಸುವ ಮೊದಲು ಶಿಷ್ಯನು ಏನೇನು ತಿಳಿದಿದ್ದಾನೆ ಎಂಬುದನ್ನು ತಿಳಿದು ಅಲ್ಲಿಂದ ಮುಂದೆ ಉಪದೇಶಿಸುತ್ತಾರೆ. ಇಲ್ಲಿ ಹಂತ ಹಂತವಾಗಿ ಒಂದಕ್ಕಿಂತ ಹೆಚ್ಚಿನದಾದ ಮತ್ತೊಂದನ್ನು ಉಪದೇಶಿಸಿ ಕೊನೆಗೆ ಸರ್ವಾತಿಶಾಯಿಯಾದುದೂ, ಸುಖ ಸ್ವರೂಪಿಯಾದುದೂ ಆದ ಪರಬ್ರಹ್ಮವನ್ನು 'ಭೂಮಾ' ಎಂದು ಉಪದೇಶಿಸಿರುವುದು ಅತ್ಯಂತ ಬೋಧಪ್ರದವಾಗಿದೆ. ಬ್ರಹ್ಮಕ್ಕಿಂತ ಹೆಚ್ಚಿನದು ಮತ್ತೊಂದಿಲ್ಲ. ಬ್ರಹ್ಮವು ಎಲ್ಲದರಲ್ಲಿಯೂ ಇರುವುದರಿಂದ

ಬ್ರಹ್ಮಕ್ಕಿಂತ ಬೇರೊಂದನ್ನು ಅಂತಹ ಸಾಧಕನು ಕಾಣುವುದೇ ಇಲ್ಲ. ಬ್ರಹ್ಮವು ತನಗಿಂತ ಬೇರೆಯಾದ ಎಲ್ಲ ವಸ್ತುಗಳಲ್ಲಿಯೂ ಆತ್ಮವಾಗಿರುವುದರಿಂದ ಅದೇ ಎಲ್ಲವೂ ಆಗಿ ಎಲ್ಲಾ ಕಡೆಯೂ ಯಾವಾಗಲೂ ಇರುತ್ತದೆ. ಈ ಉಪದೇಶವನ್ನು ಅತ್ಯಂತ ರೋಚಕವಾದ ರೀತಿಯಲ್ಲಿ ಛಾಂದೋಗ್ಯ ಉಪನಿಷತ್ತು ಪ್ರತಿಪಾದಿಸಿದೆ.

ವೇದಾಂತ ಸೂತ್ರಗಳಲ್ಲಿ ಮೊದಲನೆಯ ಅಧ್ಯಾಯದ ಮೂರನೆಯ ಪಾದದಲ್ಲಿ ಈ ಭೂಮವಿದ್ಯೆಯ ಪ್ರಸ್ತಾಪ ಇದೆ. ಸೂತ್ರಕಾರರು "ಭೂಮಾ ಸಂಪ್ರಸಾದಾದಧಿ ಉಪದೇಶಾತ್" (1-3-7) ಮತ್ತು " ಧರ್ಮೋಪ ಪತ್ತೇಶ್ಚ "-(1-3-8) ಎಂಬ ಸೂತ್ರಗಳಿಂದ "ಭೂಮಗುಣ ವಿಶಿಷ್ಟನಾದವನು ಪರಮಾತ್ಮನೇ; ಏಕೆಂದರೆ ಸಂಪ್ರಸಾದನಿಗಿಂತ ಎಂದರೆ ಪ್ರತ್ಯಗಾತ್ಮನಿಗಿಂತ ಅಧಿಕನೆಂದು ಉಪದೇಶಿಸಿದೆ, ಇಲ್ಲಿ ಹೇಳಿರುವ ಧರ್ಮಗಳು ಚೆನ್ನಾಗಿ ಅನ್ವಯಿಸುವುದರಿಂದಲೂ ಭೂಮವು ಪರಮಾತ್ಮನೇ" ಎಂದು ಸಿದ್ಧಾನ್ತಿಸಿದ್ದಾರೆ. 'ಭೂಮಾ' ಶಬ್ದದಿಂದ ಪ್ರತ್ಯಗಾತ್ಮನನ್ನೇ ಏಕೆ ಹೇಳಬಾರದು ಎಂಬ ಆಶಂಕೆಯನ್ನು ಮಾಡಿ ಅದನ್ನು ಪರಿಹರಿಸಿದ್ದಾರೆ. ಇಲ್ಲಿ ನಾಮವನ್ನು ಮೊದಲಾಗಿ ಹೊಂದಿದುವೂ ಪ್ರಾಣ ಪರ್ಯನ್ತವಾದವೂ ಆದವುಗಳಲ್ಲಿ ಹಿಂದೆ ಹಿಂದೆ ಹೇಳಿದವುಗಳಿಗಿಂತ ಮುಂದೆ ಮುಂದೆ ಹೇಳಿದವುಗಳು ಅಧಿಕವೆಂದು ಹೇಳಿರುವ ಕಾರಣ ಪ್ರಾಣ ಶಬ್ದದಿಂದ ನಿರ್ದೇಶ ಮಾಡಿದ ಪ್ರತ್ಯಗಾತ್ಮನಿಗಿಂತ 'ಸತ್ಯ'ಎಂಬ ಶಬ್ದದಿಂದ ಹೇಳಲ್ಪ ಟ್ಟಿರುವ ಪರಮಾತ್ಮನು ಅಧಿಕನಾಗಿದ್ದಾನೆ ಎಂದು ನಿಶ್ಚಯಿಸಿದೆ. 'ಸತ್ಯ', 'ಭೂಮ' 'ಬ್ರಹ್ಮ' 'ಪರಮಾತ್ಮಾ' ಇವೆಲ್ಲವೂ ಸಮಾನಾರ್ಥಕಗಳಾಗಿ ಬ್ರಹ್ಮದ ನಿರತಿಶಯ ಬೃಹತ್ವವನ್ನು ಹೇಳುತ್ತವೆ. ಬ್ರಹ್ಮದ ಸುಖರೂಪವಾದ ನಿರತಿಶಯ ವಿಪುಲತೆಯನ್ನು ತಿಳಿಯಬೇಕು ಮತ್ತು ಅನ್ವೇಷಿಸಬೇಕು. ಬ್ರಹ್ಮವನ್ನು ಅನುಭವಿಸುವಾಗ ಅದಕ್ಕಿಂತ ಬೇರೆಯಾದುದೇನನ್ನೂ ಕಾಣುವುದಿಲ್ಲ. ಏಕೆಂದರೆ ಸಮಸ್ತ ವಸ್ತುಜಾತವೂ ಬ್ರಹ್ಮಸ್ವರೂಪ ಮತ್ತು ವಿಭೂತಿಯಲ್ಲಿ ಸೇರಿಹೋಗಿರುತ್ತದೆ. ಈ ಉಪನಿಷತ್ತಿನಲ್ಲಿ ಹೇಳುವ

ಆತ್ಮಾದೇಶ ಇದೆಲ್ಲವೂ ಆತ್ಮನೇ ಎಂದು ಕೊನೆಯಾಗುತ್ತದೆ. ಪ್ರತ್ಯಗಾತ್ಮನಿಗೂ ಆತ್ಮನಾದ ಪರಮಾತ್ಮನಿಂದಲೇ ಎಲ್ಲವೂ ಉಂಟಾಗುತ್ತವೆ.

ಆದುದರಿಂದ ಇದೆಲ್ಲವೂ ಆತ್ಮನೇ ಎಂದು ಈ ಪ್ರಕರಣದಲ್ಲಿ ಉಪಸಂಹಾರ ಮಾಡಿದೆ. ಈ ಪ್ರಕರಣದಲ್ಲಿ ಬರುವ ಮತ್ತೊಂದು ವಿಶಿಷ್ಟವಾದ ಉಪದೇಶ -'ಅಹಂಗ್ರಹೋಪಾಸನೆ' - ಅಹಂಗ್ರಹೋಪಾಸನೆಯೆಂದರೆ ನಾನೇ ಬ್ರಹ್ಮವೆಂಬ ಆತ್ಮಬ್ರಹ್ಮೈಕ್ಯವಲ್ಲ. 'ನನ್ನನ್ನೂ ಶರೀರವನ್ನಾಗಿ ಹೊಂದಿರುವವನು ಆ ಪರಮಾತ್ಮನು' ಎಂಬ ಅರಿವೇ ಅಹಂಗ್ರಹೋಪಾಸನೆ.

ಹೀಗೆ ಈ ಪ್ರಕರಣದಲ್ಲಿ ಪರಮಾತ್ಮನ ಸರ್ವಾತ್ಮತ್ವವನ್ನೂ ಸರ್ವಶರೀರಿತ್ವವನ್ನೂ, ಸರ್ವಾತಿಶಾಯಿತ್ವವನ್ನೂ ಸುಸ್ಪಷ್ಟವಾಗಿ ಉಪದೇಶಿಸಿದೆ. ಸಾಧಕನು ಅನುಸರಿಸಬೇಕಾದ ಸಾಧನೆಯನ್ನೂ ಆಹಾರಶುದ್ಧಿ ಮೊದಲಾದವುಗಳಿಂದ ಸೂಚಿಸಿದೆ. ಶೋಕವನ್ನು ದಾಟಿ ಅಮೃತತ್ವವನ್ನು ಪಡೆದುಕೊಂಡು ಪರಮಾತ್ಮನ ನಿರಂತರವಾದ ಅನುಭವಾನನ್ದವನ್ನು ಪಡೆದುಕೊಳ್ಳಲು ಭೂಮಗುಣ ವಿಶಿಷ್ಟನಾದ ಆ ಪರಮಾತ್ಮನನ್ನೇ ಉಪಾಸನೆ ಮಾಡಬೇಕು ಎಂಬುದು ಈ ಪ್ರಕರಣದ ಸಾರಾರ್ಥ.

ಈ ಅನುವಾದವನ್ನು ರಂಗರಾಮಾನುಜ ಭಾಷ್ಯಕ್ಕನುಸಾರವಾಗಿ ಮಾಡಿದೆ. ಅವಶ್ಯಕ ಎನಿಸಿದೆಡೆ ಸಂಗ್ರಹವಾಗಿ ವಿವರಗಳನ್ನೂ ಸೇರಿಸಿದೆ. ಇದರ ಅಧ್ಯಯನ ಎಲ್ಲರಿಗೂ ಪ್ರಯೋಜಕವಾಗುವುದರಲ್ಲಿ ಸಂಶಯವಿಲ್ಲ. ಇದನ್ನು ವಿಶ್ವಾಸಪೂರ್ವಕವಾಗಿ ಪ್ರಕಟಿಸುತ್ತಿರುವ ಶ್ರೀರಾಮಾನುಜ ಸೇವಾ ಟ್ರಸ್ಟ್ ಅವರಿಗೂ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರು
೨೭-೬-೯೩

ಇಂತು ಸಜ್ಜನ ವಿಧೇಯ
ಎನ್.ಎಸ್. ಅನಂತ ರಂಗಾಚಾರ್ಯ

ಶಾನ್ತಿಪಾಠ

ಓಂ ಆಪ್ಯಾಯನ್ತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷು
ಶ್ರೋತ್ರಮಥೋ ಬಲಮಿನ್ದ್ರಿಯಾಣಿ ಚ ಸರ್ವಾಣಿ ಸರ್ವಂ ಬ್ರಹ್ಮೌಪ
ನಿಷದಂ ಮಾಹಂ ಬ್ರಹ್ಮನಿರಾಕುರ್ಯಾಂ ಮಾ ಮಾ ಬ್ರಹ್ಮ ನಿರಾಕರೋತ್
ಅನಿರಾಕರಣಮಸ್ತು ಅನಿರಾಕರಣಂ ಮೇಽಸ್ತು ತದಾತ್ಮನಿ ನಿರತೇ ಯ
ಉಪನಿಷತ್ಸು ಧರ್ಮಾ ತೇ ಮಯಿ ಸನ್ತು ತೇ ಮಯಿ ಸನ್ತು

ಓಂ ಶಾನ್ತಿಃ ಶಾನ್ತಿಃ ಶಾನ್ತಿಃ

ನನ್ನ ಅಂಗಗಳು ವಾಕ್ಕು, ಪ್ರಾಣ, ಕಣ್ಣುಗಳು, ಕಿವಿಗಳು, ಬಲ ಮತ್ತು ಎಲ್ಲಾ ಇಂದ್ರಿಯಗಳೂ ಹಿತಕರವಾಗಿ ಚೆನ್ನಾಗಿ ವೃದ್ಧಿಯಾಗಲಿ; ಉಪನಿಷತ್ತಿನಲ್ಲಿ ಉಪದೇಶಿಸಿರುವುದು ಎಲ್ಲವೂ ಬ್ರಹ್ಮವೇ. ನಾನು ಬ್ರಹ್ಮವನ್ನು ನಿರಾಕರಣೆ ಮಾಡದಂತಾಗಲಿ. ಬ್ರಹ್ಮವು ನನ್ನನ್ನು ನಿರಾಕರಣೆ ಮಾಡದಂತಾಗಲಿ. ಬ್ರಹ್ಮವನ್ನು ನಿರಾಕರಣೆ ಮಾಡದಂತಾಗಲಿ. ನನ್ನಿಂದ ಬ್ರಹ್ಮದ ನಿರಾಕರಣೆ ಆಗದಿರಲಿ. ಉಪನಿಷತ್ತುಗಳಲ್ಲಿ ಉಪದಿಷ್ಟವಾದ ಧರ್ಮಗಳು ಆತ್ಮನಿರತನಾದ ನನ್ನಲ್ಲಿ ಉಂಟಾಗಲಿ. ಆ ಧರ್ಮಗಳು ನನ್ನಲ್ಲಿ ಉಂಟಾಗಲಿ. ಅವು ನನ್ನಲ್ಲಿ ಉಂಟಾಗಲಿ.

ಓಂ ಶಾನ್ತಿ ಶಾನ್ತಿ ಶಾನ್ತಿ ಆಗಲಿ

ಶ್ರೀಃ

ಛಾಂದೋಗ್ಯ ಉಪನಿಷತ್ ಏಳನೆಯ ಪ್ರಪಾಠಕ

ಭೂಮ ವಿದ್ಯಾ

ನಾರದ ಸನತ್ಕುಮಾರ ಸಂವಾದ

ಓಂ ಅಧೀಹಿ ಭಗವ ಇತಿ ಹೋಪಸಸಾದ ಸನತ್ಕುಮಾರಂ ನಾರದಸ್ತಂ ಹೋವಾಚ ಯದ್ವೇತ್ಥ ತೇನ ಮೋಪಸೀದ ತತಸ್ತ ಊರ್ಧ್ವಂ ವಕ್ಷ್ಯಾಮೀತಿ ಸ ಹೋವಾಚ || ೧ ||

ನಾರದ ಋಷಿಯು 'ಭಗವಂತನು ಉಪದೇಶಿಸಬೇಕು' ಎಂದು ಸನತ್ಕುಮಾರರನ್ನು ವಿಧಿವತ್ತಾಗಿ ಮಂತ್ರೋಚ್ಚಾರಣ ಪೂರ್ವಕ ಬಳಿ ಸಾರಿದನು. ಸನತ್ಕುಮಾರರು ಅವನನ್ನು ಕುರಿತು ಹೇಳಿದರು -"ಏನನ್ನು ನೀನು ತಿಳಿದಿರುವೆಯೋ ಅದನ್ನು ತಿಳಿಸುವವನಾಗಿ ನನ್ನ ಬಳಿಗೆ ಬಾ. ಅದಕ್ಕಿಂತ ಮುಂದಕ್ಕೆ ನಾನು ಹೇಳಿಕೊಡುವೆನು".

ವಿ : ಉಪಸಸಾದ - ಶಾಸ್ತ್ರದಲ್ಲಿ ವಿಧಿಸಿರುವಂತೆ ಮಂತ್ರೋಚ್ಚಾರಣ ಪೂರ್ವಕವಾಗಿ ಸಮೀಪಿಸಿದನು.

ಋಗ್ವೇದಂ ಭಗವೋಽಧ್ಯೇಮಿ ಯಜುರ್ವೇದಂ ಸಾಮವೇದ ಮಾಥರ್ವಣಂ ಚತುರ್ಥಮಿತಿಹಾಸ ಪುರಾಣಂ ಪಞ್ಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರ ವಿದ್ಯಾಂ ನಕ್ಷತ್ರ ವಿದ್ಯಾಂ ಸರ್ಪದೇವ ಜನ ವಿದ್ಯಾಮೇತದ್ಭಗವೋಽಧ್ಯೇಮಿ || ೨ ||

ನಾ : ಭಗವಂತನೇ, ನಾನು ಋಗ್ವೇದವನ್ನು ಬಲ್ಲೆನು, ಯಜುರ್ವೇದ, ಸಾಮವೇದ, ನಾಲ್ಕನೆಯದಾದ ಅಥರ್ವಣವೇದ, ಇತಿಹಾಸ, ಪುರಾಣ, ವೇದಗಳ ವೇದ, ಪಿತ್ರ್ಯ, ರಾಶಿ, ದೈವ, ನಿಧಿ, ವಾಕೋವಾಕ್ಯ, ಏಕಾಯನ, ದೇವವಿದ್ಯೆ ಬ್ರಹ್ಮ ವಿದ್ಯೆ, ಭೂತವಿದ್ಯೆ, ಕ್ಷತ್ರವಿದ್ಯೆ, ನಕ್ಷತ್ರವಿದ್ಯೆ, ಸರ್ಪ - ದೇವ - ಜನ ವಿದ್ಯೆ ಇವೆಲ್ಲವನ್ನೂ ತಿಳಿದಿದ್ದೇನೆ.

ಏ : ವೇದಾನಾಂ ವೇದಂ -- ಪ್ರಕೃತಿ ಪ್ರತ್ಯಯ ವಿಭಾಗವನ್ನು ತಿಳಿಸುವ ವ್ಯಾಕರಣವನ್ನು, ಪಿತ್ರ್ಯಂ--ಎಂದರೆ ಶ್ರಾದ್ಧಕಲ್ಪ, ರಾಶಿ ಎಂದರೆ ಗಣಿತ, ದೈವ-ಉತ್ಪಾತಜ್ಞಾನ, ನಿಧಿ-ನಿಧಿಯನ್ನು ತೋರಿಸಿಕೊಡುವ ಉಪಾಯ ಪ್ರದರ್ಶನ ಶಾಸ್ತ್ರ, ವಾಕೋವಾಕ್ಯ,- ತರ್ಕಶಾಸ್ತ್ರ; ಏಕಾಯನ- ವೇದದಶಾಖೆ; ದೇವವಿದ್ಯೆ-ದೇವತೋಪಾಸನೆ; ಬ್ರಹ್ಮವಿದ್ಯೆ-ವೇದಾಂಗ ಭೂತವಾದ ಶಿಕ್ಷಾ ಮೊದಲಾದವು; ಭೂತವಿದ್ಯೆ - ವಶೀಕರಣ ವಿದ್ಯೆ; ಕ್ಷತ್ರ ವಿದ್ಯೆ-ಧನುರ್ವೇದ; ನಕ್ಷತ್ರವಿದ್ಯೆ-ಜ್ಯೋತಿಷ; ಸರ್ಪವಿದ್ಯೆ- ಗಾರುಡ ವಿದ್ಯೆ; ದೇವವಿದ್ಯೆ- ಗಂಧರ್ವ ಶಾಸ್ತ್ರ; ಜನವಿದ್ಯೆ- ಆಯುರ್ವೇದ.

ಸೋಽಹಂ ಭಗವೋ ಮಂತ್ರವಿದೇವಾಸ್ಮಿ ನಾತ್ಮವಿಚ್ಛ್ರುತಂ ಹ್ಯೇವ ಮೇ ಭಗವದ್ದೃಶೇಭ್ಯಸ್ತರತಿ ಶೋಕಮಾತ್ಮವಿದಿತಿ ಸೋಽಹಂ ಭಗವಃ ಶೋಚಾಮಿ ತಂ ಮಾ ಭಗವಾಞ್ಛೋಕಸ್ಯ ಪಾರಂ ತಾರಯತ್ವಿತಿ ತಂ ಹೋವಾಚ ಯದ್ವೈ ಕಿಂಚೈತದ ಧ್ಯಗೀಷ್ಠಾ ನಾಮೈವೈತತ್ ॥ ೩ ॥

"ಭಗವಂತನೇ ನಾನು ಮಂತ್ರವನ್ನು ತಿಳಿದವನಾಗಿದ್ದೇನೆ. ಪರಬ್ರಹ್ಮವನ್ನು ತಿಳಿದವನಾಗಿಲ್ಲ. ಆತ್ಮವನ್ನು ತಿಳಿದವರು ಸಂಸಾರವನ್ನು ದಾಟುವರೆಂದು ತಮ್ಮಂಥವರಿಂದ ಕೇಳಿರುತ್ತೇನೆ. ಭಗವಂತನೇ, ಅಂಥ ನಾನು ಶೋಕಿಸುತ್ತಿದ್ದೇನೆ. ಪೂಜ್ಯರು ನನ್ನನ್ನು ಶೋಕದ ಪಾರವನ್ನು ದಾಟಿಸಬೇಕು". ಅವನನ್ನು ಕುರಿತು ಸನತ್ಕುಮಾರರು ಹೇಳಿದರು - "ನೀನು ಈ ಯಾವುದನ್ನು ತಿಳಿದಿದ್ದೀಯೋ ಅದೆಲ್ಲ ನಾಮವೇ".

ನಾಮ ವಾ ಋಗ್ವೇದೋ ಯಜುರ್ವೇದಃ ಸಾಮವೇದ ಆಥರ್ವಣಶ್ಚತುರ್ಥ ಇತಿಹಾಸ ಪುರಾಣಃ ಪಂಚಮೋ ವೇದಾನಾಂ ವೇದಃ

ಪಿತ್ರ್ಯೋ ರಾಶಿರ್ದೈವೋ ನಿಧಿರ್ವಾಕೋವಾಕ್ಯಮೇಕಾಯನಂ ದೇವವಿದ್ಯಾ ಬ್ರಹ್ಮವಿದ್ಯಾ ಭೂತವಿದ್ಯಾ ಕ್ಷತ್ರವಿದ್ಯಾ ನಕ್ಷತ್ರವಿದ್ಯಾ ಸರ್ಪದೇವ ಜನವಿದ್ಯಾ ನಾಮೈವೈತನ್ನಾಮೋಪಾಸ್ಸ್ವೇತಿ ॥ ೪ ॥

ಸ : ಋಗ್ವೇದವೂ ನಾಮವೇ. ಯಜುರ್ವೇದ, ಸಾಮವೇದ, ನಾಲ್ಕನೆಯದಾದ ಇತಿಹಾಸ ಪುರಾಣ, ವೇದಗಳ ವೇದ, ಪಿತ್ರ್ಯ, ರಾಶಿ, ದೈವ, ನಿಧಿ, ವಾಕೋವಾಕ್ಯ, ಏಕಾಯನ, ದೇವವಿದ್ಯೆ, ಬ್ರಹ್ಮವಿದ್ಯೆ, ಭೂತವಿದ್ಯೆ, ಕ್ಷತ್ರವಿದ್ಯೆ, ನಕ್ಷತ್ರವಿದ್ಯೆ, ಸರ್ಪದೇವಜನ ವಿದ್ಯೆ ಇದು ನಾಮವೇ. ಆದುದರಿಂದ ನಾಮವನ್ನು ಉಪಾಸನೆ ಮಾಡು.

ಏ : ಸರ್ವವೂ ನಾಮವೇ. ಆದರಿಂದೇನು ಎಂದರೆ ಇಲ್ಲಿ ಆದು ಬ್ರಹ್ಮದಂತೆ. ಆದುದರಿಂದ ನಾಮವನ್ನೇ ಬ್ರಹ್ಮವೆಂದು ಉಪಾಸನೆ ಮಾಡು.

ಸ ಯೋ ನಾಮ ಬ್ರಹ್ಮೇತ್ಯುಪಾಸ್ತೇ ಯಾವನ್ನಾಮ್ನೋ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ನಾಮ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ನಾಮ್ನೋ ಭೂಯ ಇತಿ ನಾಮ್ನೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ೫ ॥

ಸ : ಯಾವನು ನಾಮವನ್ನು ಬ್ರಹ್ಮವೆಂದು ಉಪಾಸನೆ ಮಾಡುವನೋ, ಅವನು ನಾಮದ ಪ್ರವೃತ್ತಿಯು ಯಾವ ದೇಶದವರೆಗೂ ಇರುತ್ತದೆಯೋ ಅಲ್ಲಿ ಯಥೇಷ್ಟವಾಗಿ ಸಂಚರಣಶಾಲಿಯಾಗುತ್ತಾನೆ. ಯಾವನು ನಾಮವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ ಅವನಿಗೆ ಈ ಫಲ.

ನಾ : ಭಗವಂತನೇ, ನಾಮಕ್ಕಿಂತ ಹೆಚ್ಚಿನದು ಇದೆಯೆ?

ಸ : ಇದ್ದೇ ಇದೆ.

ನಾ : ಅದನ್ನು ಭಗವಾನರು ನನಗೆ ಹೇಳಿಕೊಡಬೇಕು.

ಇಲ್ಲಿಗೆ ಮೊದಲನೆಯ ಖಂಡ ಮುಗಿಯಿತು

* * *

ಎರಡನೆಯ ಖಂಡ
ವಾಕ್ ಬ್ರಹ್ಮ

ವಾಗ್ವಾವ ನಾಮ್ನೋ ಭೂಯಸೀ ವಾಗ್ವಾ ಋಗ್ವೇದಂ ವಿಜ್ಞಾಪಯತಿ ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯ ಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಂ ಸರ್ಪದೇವಜನವಿದ್ಯಾಂ ದಿವಂ ಚ ಪೃಥಿವೀಂ ಚ ವಾಯುಂ ಚಾಕಾಶಂ ಚಾಪಶ್ಚ ತೇಜಶ್ಚ ದೇವಾಂಶ್ಚ ಮನುಷ್ಯಾಂಶ್ಚ ಪಶೂಂಶ್ಚ ವಯಾಂಸಿ ಚ ತೃಣವನಸ್ಪತೀಂಶ್ಶ್ವಾ ಪದಾನ್ಯಾಕೀಟ ಪತಙ್ಗ ಪಿಪೀಲಕಂ ಧರ್ಮಂ ಚಾಧರ್ಮಂ ಚ ಸತ್ಯಂ ಚಾನೃತಂ ಚ ಸಾಧು ಚಾಸಾಧು ಚ ಹೃದಯಜ್ಞಂ ಚಾ ಹೃದಯಜ್ಞಂ ಚ ಯದ್ವೈ ವಾಙ್ ನಾಭವಿಷ್ಯನ್ನ ಧರ್ಮೋ ನಾಧರ್ಮೋ ವ್ಯಜ್ಞಾಪಯಿಷ್ಯನ್ನ ಸತ್ಯಂ ನಾನೃತಂ ನ ಸಾಧು ನಾಸಾಧು ನಹೃದಯಜ್ಞೋ ನಾಹೃದಯಜ್ಞೋ ವಾಗೇವೈತತ್ಸರ್ವಂ ವಿಜ್ಞಾಪಯತಿ ವಾಚಮು ಪಾಸ್ಸ್ವೇತಿ ॥ ೧ ॥

ನಾಮಕ್ಕಿಂತ ಹೆಚ್ಚಾದುದು ವಾಕ್ ಅಲ್ಲವೆ ! ವಾಕ್ಕೇ ಅಲ್ಲವೆ ಋಗ್ವೇದವನ್ನು ತಿಳಿಸಿಕೊಡುವುದು? ಯಜುರ್ವೇದ, ಸಾಮವೇದ, ನಾಲ್ಕನೆಯದಾದ ಅಥರ್ವಣ, ಐದನೆಯದಾದ ಇತಿಹಾಸ ಪುರಾಣ, ವೇದಗಳ ವೇದ, ಪಿತ್ರ್ಯ, ರಾಶಿ, ದೈವ, ನಿಧಿ, ವಾಕೋವಾಕ್ಯ, ಏಕಾಯನ, ದೇವವಿದ್ಯೆ, ಬ್ರಹ್ಮವಿದ್ಯೆ, ಭೂತವಿದ್ಯೆ, ಕ್ಷತ್ರವಿದ್ಯೆ, ನಕ್ಷತ್ರವಿದ್ಯೆ, ಸರ್ಪದೇವ ಜನವಿದ್ಯೆ, ದ್ಯುಲೋಕ, ಪೃಥಿವೀಲೋಕ, ವಾಯು, ಆಕಾಶ, ಅಪ್ಪು, ತೇಜಸ್ಸು, ದೇವತೆಗಳು, ಮನುಷ್ಯರು, ಪಶುಗಳು, ಪಕ್ಷಿಗಳು, ತೃಣ, ವನಸ್ಪತಿಗಳು, ಹಿಂಸ್ರ ಮೃಗಗಳು, ಹುಳು, ಚಿಟ್ಟೆ, ಇರುವೆ - ವರೆಗೂ ಎಲ್ಲವನ್ನೂ, ಧರ್ಮವನ್ನು, ಅಧರ್ಮವನ್ನು, ಸತ್ಯವನ್ನು, ಅನೃತವನ್ನು, ಒಳ್ಳೆಯದನ್ನು, ಕೆಟ್ಟದನ್ನು, ಮನೋಜ್ಞವಾದುದನ್ನು, ಮನೋಜ್ಞವಲ್ಲ ದುದನ್ನು - ಇವೆಲ್ಲವನ್ನೂ ವಾಕ್ಕೇ ತಿಳಿಸಿಕೊಡುತ್ತದೆ. ವಾಕ್ಕು

ಇಲ್ಲದೇಇದ್ದಿದ್ದರೆ ಧರ್ಮವಾಗಲೀ ಅಧರ್ಮವಾಗಲೀ ತಿಳಿದು ಬರುತ್ತಿರಲಿಲ್ಲ. ಸತ್ಯವಾಗಲೀ ಅನೃತವಾಗಲೀ, ಒಳ್ಳೆಯದಾಗಲೀ, ಕೆಟ್ಟದಾಗಲೀ, ಮನೋಜ್ಞವಾದುದಾಗಲೀ, ಅಮನೋಜ್ಞವಾದುದಾಗಲೀ ಯಾವುದೂ ತಿಳಿದು ಬರುತ್ತಿರಲಿಲ್ಲ. ವಾಕ್ಕೇ ಇದೆಲ್ಲವನ್ನೂ ತಿಳಿಸಿಕೊಡುತ್ತದೆ. ವಾಕ್ಕನ್ನು ಉಪಾಸನೆ ಮಾಡು.

ವಿ : ವಾಕ್ ಇಲ್ಲದೇ ಇದ್ದರೆ ಈ ಯಾವ ಜ್ಞಾನವೂ ಇರುತ್ತಿರಲಿಲ್ಲ. ವಾಗಿಂದ್ರಿಯವಿಲ್ಲದೇ ಇದ್ದಿದ್ದರೆ ವೇದಾಧ್ಯಯನ ವೊದಲಾದವು ಇರುತ್ತಿರಲಿಲ್ಲ. ವಾಕ್ಕು ಹೀಗೆ ನಾಮಕ್ಕಿಂತ ವ್ಯಾಪಕವಾದುದರಿಂದ ಅದನ್ನು ಬ್ರಹ್ಮ ಎಂದು ಉಪಾಸನೆ ಮಾಡು.

ಸ ಯೋ ವಾಚಂ ಬ್ರಹ್ಮೇತ್ಯುಪಾಸ್ತೇ ಯಾವದ್ವಾಚೋ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ವಾಚಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ವಾಚೋ ಭೂಯ ಇತಿ ವಾಚೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ಬ್ರವೀತ್ವಿತಿ ॥ ೨ ॥

ಯಾವನು ವಾಕ್ಕನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ, ಅವನು ವಾಕ್ಕಿನ ಪ್ರವೃತ್ತಿ ಎಲ್ಲಿಯವರೆಗೆ ಇರುವುದೋ ಅಲ್ಲಿ ಯಥಾಕಾಮಚಾರವನ್ನು ಹೊಂದಿರುತ್ತಾನೆ. ಇದು ವಾಕ್ಕನ್ನು ಬ್ರಹ್ಮವೆಂದು ಉಪಾಸನೆ ಮಾಡುವವನಿಗೆ ಫಲ.

ನಾ : "ಭಗವಂತನೆ, ವಾಕ್ಕಿಗಿಂತ ಹೆಚ್ಚಿನದು ಇದೆಯೆ"?

ಸ : " ವಾಕ್ಕಿಗಿಂತ ಹೆಚ್ಚಿನದು ಇದ್ದೇ ಇದೆ."

ನಾ : ಭಗವಂತನು ಅದನ್ನು ನನಗೆ ತಿಳಿಸಿಕೊಡಬೇಕು.

ಇಲ್ಲಿಗೆ ಎರಡನೆಯ ಖಂಡ ಮುಗಿಯಿತು

* * *

ಮೂರನೆಯ ಖಂಡ
ಮನೋ ಬ್ರಹ್ಮ

ಮನೋ ವಾವ ವಾಚೋ ಭೂಯೋ ಯಥಾ ದ್ವೌ ದ್ವೌ ವಾಮಲಕೌ ದ್ವೌ ವಾ ಕೋಲೌ ದ್ವೌ ವಾಕ್ಷೌ ಮುಷ್ಟಿರನುಭವತ್ಯೇವಂ ವಾಚಂ ಚ ನಾಮ ಚ ಮನೋಽನುಭವತಿ ಸ ಯದಾ ಮನಸಾ ಮನಸ್ಯತಿ ಮಂತ್ರಾನ ಧೀಯೀಯೇತ್ಯಥಾಧೀತೇ ಕರ್ಮಾಣಿ ಕುರುತೇ ಪುತ್ರಾಂಶ್ಚ ಪಶೂಂಶ್ಚೇಚ್ಛೇಯೇತ್ಯಥೇಚ್ಛತ ಇಮಂ ಚ ಲೋಕಮಮುಂ ಚೇಚ್ಛೇಯೇತ್ಯಥೇಚ್ಛತೇ ಮನೋಽಶ್ಯಾತ್ಮಾ ಮನೋ ಹಿ ಲೋಕೋ ಮನೋ ಹಿ ಬ್ರಹ್ಮ ಮನ ಉಪಾಸ್ಸ್ವೇತಿ || ೧ ||

ಸ : ಮನಸ್ಸು ವಾಕ್ಕಿಗಿಂತ ಹೆಚ್ಚಿನದು. ಹೇಗೆ ಎರಡು ನೆಲ್ಲೀಕಾಯಿಗಳನ್ನು ಅಥವಾ ಎರಡು ಎಲಚಿಹಣ್ಣುಗಳನ್ನು ಅಥವಾ ಎರಡು ಅಕ್ಷಗಳನ್ನು ಒಂದು ಮುಷ್ಟಿಯು ತನ್ನೊಳಗೆ ಸೇರಿಸಿಕೊಳ್ಳುವುದೋ ಹಾಗೆ ವಾಕ್ಯನ್ನೂ, ನಾಮವನ್ನೂ ಮನಸ್ಸು ಅನುಭವಿಸುತ್ತದೆ. "ಯಾವಾಗ ಮಂತ್ರಗಳನ್ನು ಅಧ್ಯಯನ ಮಾಡುವೆನು" ಎಂದು ಮನಸ್ಸು ಮಾಡುವನೋ ಆಗ ಅಧ್ಯಯನ ಮಾಡುತ್ತಾನೆ. ಕರ್ಮಗಳನ್ನು ಮಾಡುವೆನೆಂದು ಮನಸ್ಸು ಮಾಡಿದಾಗ ಕರ್ಮಗಳನ್ನು ಮಾಡುತ್ತಾನೆ. ಪುತ್ರರನ್ನು, ಪಶುಗಳನ್ನು ಬಯಸುವೆನೆಂದು ಮನಸ್ಸು ಮಾಡಿದಾಗ ಇಚ್ಛಿಸುತ್ತಾನೆ. ಈ ಲೋಕವನ್ನು ಇಚ್ಛಿಸುವೆನೆಂದು ಯಾವಾಗ ಮನಸ್ಸು ಮಾಡುವನೋ ಆಗ ಇಚ್ಛಿಸುತ್ತಾನೆ. ಮನಸ್ಸೇ ಆತ್ಮ. ಮನಸ್ಸೇ ಲೋಕ, ಮನಸ್ಸೇ ಬ್ರಹ್ಮ; ಮನಸ್ಸನ್ನು ಉಪಾಸನೆ ಮಾಡು.

ವಿ : ವಾಕ್ಕಿನ ದೃಷ್ಟಿಯಿಂದ ನೋಡಿದರೆ ಮನಸ್ಸು ಅದಕ್ಕಿಂತ ಬೃಹತ್ತಾದುದರಿಂದ ಮನಸ್ಸೇ ಬ್ರಹ್ಮ.

ಸ ಯೋ ಮನೋ ಬ್ರಹ್ಮೇತ್ಯುಪಾಸ್ತೇ ಯಾವನ್ಮನಸೋ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ಮನೋ ಬ್ರಹ್ಮೇತ್ಯು

ಪಾಸ್ತೇಽಸ್ತು ಭಗವೋ ಮನಸೋ ಭೂಯ ಇತಿ ಮನಸೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ || ೨ ||

ಸ : ಯಾವನು ಮನಸ್ಸನ್ನು ಬ್ರಹ್ಮವೆಂದು ಉಪಾಸಿಸುವನೋ ಅವನು ಮನಸ್ಸಿನ ಪ್ರವೃತ್ತಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಅವನಿಗೆ ಯಥೇಷ್ಟವಾದ ಕಾಮಚಾರವಿರುವುದು.

ನಾ : ಭಗವಂತನೆ, ಮನಸ್ಸಿಗಿಂತ ಹೆಚ್ಚಿನದು ಇದೆಯೆ?

ಸ : -ಮನಸ್ಸಿಗಿಂತ ಹೆಚ್ಚಿನದು ಇದ್ದೇ ಇದೆ.

ನಾ : ಅದನ್ನು ಭಗವಾನರು ನನಗೆ ಹೇಳಿಕೊಡಬೇಕು.

ಇಲ್ಲಿಗೆ ಮೂರನೆಯ ಖಂಡ ಮುಗಿದುದು

* * *

ನಾಲ್ಕನೆಯ ಖಂಡ
ಸಂಕಲ್ಪ ಬ್ರಹ್ಮ

ಸಂಕಲ್ಪೋ ವಾವ ಮನಸೋ ಭೂಯಾನ್ಯದಾ ವೈ ಸಂಕಲ್ಪ ಯತೇಽಥ ಮನಸ್ಯತ್ಯಥ ವಾಚಮೀರಯತಿ ತಾಮು ನಾಮ್ನೀರಯತಿ ನಾಮ್ನಿ ಮಂತ್ರಾ ಏಕಂ ಭವಂತಿ ಮಂತ್ರೇಷು ಕರ್ಮಾಣಿ || ೧ ||

ಸ : ಸಂಕಲ್ಪವು ಮನಸ್ಸಿಗಿಂತ ಹೆಚ್ಚಿನದು. ಯಾವಾಗ ಸಂಕಲ್ಪಿಸುವನೋ ಆಗ ಮನಸ್ಸು ಮಾಡುತ್ತಾನೆ. ಆಮೇಲೆ ವಾಕ್ಯನ್ನು ಪ್ರೇರಿಸುತ್ತಾನೆ. ಅದನ್ನು ನಾಮದಲ್ಲಿ ಪ್ರೇರಿಸುತ್ತಾನೆ. ನಾಮದಲ್ಲಿ ಮಂತ್ರಗಳು ಒಂದಾಗಿರುತ್ತವೆ. ಮಂತ್ರಗಳಲ್ಲಿ ಕರ್ಮಗಳು ಒಂದಾಗಿವೆ.

ವಿ : ಸಂಕಲ್ಪ ಎಂದರೆ ಇದನ್ನು ಮಾಡುವುದು ಯುಕ್ತ ಎಂದು ಸಮರ್ಥನಮಾಡುವುದು.

ತಾನಿ ಹ ವಾ ಏತಾನಿ ಸಂಕಲ್ಪೈಕಾಯನಾನಿ ಸಂಕಲ್ಪಾತ್ಮಕಾನಿ ಸಂಕಲ್ಪೇ ಪ್ರತಿಷ್ಠಿತಾನಿ ಸಮಂಕ್ಷು ಪತಾಂ ದ್ಯಾವಾಪೃಥಿವೀ ಸಮಂಕಲ್ಪೇತಾಂ ವಾಯುಶ್ಚಾಕಾಶಂ ಚ ಸಮಕಲ್ಪಂತಾಪಶ್ಚ ತೇಜಶ್ಚ ತೇಷಾಂ ಸಂಕ್ಲೃಪ್ತ್ಯೈ ವರ್ಷಂ ಸಂಕಲ್ಪತೇ ವರ್ಷಸ್ಯ ಸಂಕ್ಲೃಪ್ತ್ಯಾ ಅನ್ನಂ ಸಂಕಲ್ಪತೇಽನ್ನಸ್ಯ ಸಂಕ್ಲೃಪ್ತ್ಯೈ ಪ್ರಾಣಾಃ ಸಂಕಲ್ಪಂತೇ ಪ್ರಾಣಾನಾಂ ಸಂಕ್ಲೃಪ್ತ್ಯೈ ಮಂತ್ರಾಃ ಸಂಕಲ್ಪಂತೇ ಮಂತ್ರಾಣಾಂ ಸಂಕ್ಲೃಪ್ತ್ಯೈ ಕರ್ಮಾಣಿ ಸಂಕಲ್ಪಂತೇ ಕರ್ಮಣಾಂ ಸಂಕ್ಲೃಪ್ತ್ಯೈ ಲೋಕಃ ಸಂಕಲ್ಪತೇ ಲೋಕಸ್ಯ ಸಂಕ್ಲೃಪ್ತ್ಯೈ ಸರ್ವಂ ಸಂಕಲ್ಪತೇ ಸ ಏಷಃ ಸಂಕಲ್ಪಃ ಸಂಕಲ್ಪಮುಪಾಸ್ಸ್ವೇತಿ ॥ ೨ ॥

ಸ : ಈ ನಾಮಾದಿಗಳು ಸಂಕಲ್ಪವೆಂಬ ಒಂದೇ ಮಾರ್ಗವುಳ್ಳವು. ಎಂದರೆ ಸಂಕಲ್ಪಾನುಸಾರೀ ಆದವು. ಸಂಕಲ್ಪದಿಂದ ಮಾಡಲ್ಪಡತಕ್ಕವು. ಸಂಕಲ್ಪದಲ್ಲಿ ಪ್ರತಿಷ್ಠಿತವಾದವು ಎಂದರೆ ಸಂಕಲ್ಪಾಧೀನವಾದುವು. ದ್ಯುಲೋಕ ಮತ್ತು ಪೃಥೀವೀ ನಿಶ್ಚಲವಾಗಿ ಇರುವೆವೆಂದು ಸಂಕಲ್ಪಿಸುತ್ತವೆ. ವಾಯುವೂ ಆಕಾಶವೂ ಸಂಕಲ್ಪಿಸುತ್ತವೆ. (ನಮ್ಮ ನಮ್ಮ ರೂಪದಲ್ಲಿ ಇರುವೆವೆಂದು) ಅಪ್ಪು, ತೇಜಸ್ಸು ಸಂಕಲ್ಪಿಸುತ್ತವೆ. ಅವುಗಳ ಸಂಕಲ್ಪಕ್ಕಾಗಿ ವರ್ಷವು ಸಂಕಲ್ಪಿಸುತ್ತದೆ. ವರ್ಷದ ಸಂಕಲ್ಪಕ್ಕಾಗಿ ಅನ್ನವು ಸಂಕಲ್ಪಿಸುತ್ತದೆ. ಅನ್ನದ ಸಂಕಲ್ಪಕ್ಕಾಗಿ ಪ್ರಾಣಗಳು ಸಂಕಲ್ಪಿಸುತ್ತವೆ. ಪ್ರಾಣಗಳ ಸಂಕಲ್ಪಕ್ಕಾಗಿ ಮಂತ್ರಗಳು ಸಂಕಲ್ಪಿಸುತ್ತವೆ. ಮಂತ್ರಗಳ ಸಂಕಲ್ಪಕ್ಕಾಗಿ ಕರ್ಮಗಳು ಸಂಕಲ್ಪಿಸುತ್ತವೆ. ಕರ್ಮಗಳ ಸಂಕಲ್ಪಕ್ಕಾಗಿ ಲೋಕವು ಸಂಕಲ್ಪಿಸುತ್ತದೆ. ಲೋಕದ ಸಂಕಲ್ಪಕ್ಕಾಗಿ ಎಲ್ಲವೂ ಸಂಕಲ್ಪಿಸುತ್ತವೆ. ಸಂಕಲ್ಪವು ಇಂಥ ಮಹಿಮಾಶಾಲಿಯಾದುದು. ಸಂಕಲ್ಪವನ್ನು ಉಪಾಸನೆಮಾಡು.

ವಿ : ದ್ಯಾವಾ ಪೃಥಿವೀಗಳು ನಿಶ್ಚಲವಾಗಿರುವೆವೆಂದು, ಸಂಕಲ್ಪಿಸುತ್ತವೆ. ವಾಯು ಆಕಾಶಗಳು ಸ್ವಸ್ವರೂಪದಲ್ಲಿರುವೆವೆಂದು, ತಮ್ಮ ತಮ್ಮ ಕೆಲಸವನ್ನು ನಿರ್ವಹಿಸುವೆವೆಂದು ಸಂಕಲ್ಪಿಸುತ್ತವೆ. ಜಲ ಮತ್ತು ತೇಜಸ್ಸುಗಳು ಚೆನ್ನಾಗಿ ಸಂಕಲ್ಪಿಸಲಿ. ಅವುಗಳ ಕಾರ್ಯಮಾಡಲಿ ಎಂದು ಅವುಗಳ ಸಿದ್ಧಿಗಾಗಿ ವರ್ಷ ಸಂಕಲ್ಪಿಸುತ್ತದೆ. ಅನ್ನ ವರ್ಷಕ್ಕೆ ಅಧೀನವಾದುದರಿಂದ ವರ್ಷದ ಸಿದ್ಧಿಗಾಗಿ ಅನ್ನವು ಸಂಕಲ್ಪಿಸುತ್ತದೆ. ಅನ್ನ

ಸಮೃದ್ಧಿಯನ್ನು ಪ್ರಾಣಗಳು ಸಂಕಲ್ಪಿಸುತ್ತವೆ. ಮಂತ್ರೋಚ್ಚಾರಣೆ ಪ್ರಾಣಕ್ಕೆ ಅಧೀನವಾಗಿರುವುದರಿಂದ ಮಂತ್ರಗಳು ಪ್ರಾಣದ ಸಿದ್ಧಿಯನ್ನು ಆಶಂಸಿಸುತ್ತವೆ. ಅಗ್ನಿಹೋತ್ರಾದಿ ಕರ್ಮಗಳು ಮಂತ್ರದಿಂದ ಉಂಟಾದ ಸ್ಮೃತಿಗೆ ಅಧೀನವಾದ ಅನುಷ್ಠಾನವನ್ನು ಹೊಂದಿರುವುದರಿಂದ ಕರ್ಮಗಳು ಮಂತ್ರಗಳ ಸಿದ್ಧಿಯನ್ನು ಆಶಂಸಿಸುತ್ತವೆ. ಸ್ವರ್ಗಾದಿ ಲೋಕ ಕರ್ಮಕ್ಕೆ ಅಧೀನವಾದ ಸಿದ್ಧಿ ಹೊಂದಿರುವುದರಿಂದ ಆ ಕರ್ಮದ ಸಿದ್ಧಿಯನ್ನು ಲೋಕಗಳು ಆಶಂಸಿಸುತ್ತವೆ. ಎಲ್ಲಾ ಭೂತಜಾತಗಳು ಲೋಕವನ್ನು ಬಯಸುವುದರಿಂದ ಲೋಕದ ಸಿದ್ಧಿಯನ್ನು ಬಯಸುತ್ತವೆ.

ಅಚೇತನಗಳು ಸಂಕಲ್ಪಿಸುವುದು ಹೇಗೆ?

ಈ ಹೇಳಿಕೆ ಸಂಕಲ್ಪದ ಸ್ತುತ್ಯರ್ಥ. ಅಥವಾ ಚೇತನತ್ವವನ್ನು ಅಚೇತನದಲ್ಲಿ ಆರೋಪಿಸಿ ಮಾಡಿದುದು. ಅಥವಾ ಅವು ಆಯಾಯಾ ಅಭಿಮಾನಿ ದೇವತೆಗಳನ್ನು ಸೂಚಿಸುತ್ತವೆ.

ಸ ಯಃ ಸಂಕಲ್ಪಂ ಬ್ರಹ್ಮೇತ್ಯುಪಾಸ್ತೇ ಕ್ಲಪ್ತಾನ್ ವೈ ಸ ಲೋಕಾನ್ ಧ್ರುವಾನ್ಧ್ರುವಃ ಪ್ರತಿಷ್ಠಿತಾನ್ ಪ್ರತಿಷ್ಠಿತೋಽವ್ಯಥಮಾನಾನವ್ಯಥಮಾನೋಽಭಿಸಿಧ್ಯತಿ| ಯಾವತ್ ಸಂಕಲ್ಪಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯಃ ಸಂಕಲ್ಪಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವಃ ಸಂಕಲ್ಪಾದ್ಭೂಯ ಇತಿ ಸಂಕಲ್ಪಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ೩ ॥

ಸ : ಯಾರು ಸಂಕಲ್ಪವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾರೋ ಅವನು ಕ್ಲಪ್ತವಾದ ಎಂದರೆ ಸಂಕಲ್ಪಸಿದ್ಧವಾದ ನಿತ್ಯವಾದ ಭೋಗೋಪಕರಣಗಳಿಂದ ಪ್ರತಿಷ್ಠಿತನಾಗಿ, ಶತ್ರುಪೀಡಾದಿರಹಿತನಾಗಿ ಅಂಥ ಲೋಕಗಳನ್ನು ವ್ಯಥೆ ಇಲ್ಲದೆ ಪಡೆಯುತ್ತಾನೆ. ಎಲ್ಲಿಯವರೆಗೆ ಸಂಕಲ್ಪದ ಗತಿ ಇರುವುದೋ ಅಲ್ಲೆಲ್ಲಾ ಇವನಿಗೆ ಕಾಮಚಾರವಿರುವುದು. ಯಾವನು ಸಂಕಲ್ಪವನ್ನು ಬ್ರಹ್ಮವೆಂದು ಉಪಾಸನೆ ಮಾಡುವನೋ ಅವನಿಗೆ ಈ ಫಲ.

ನಾ. ಭಗವಾನರೇ, ಸಂಕಲ್ಪಕ್ಕಿಂತ ಹೆಚ್ಚಿನದು ಇದೆಯೆ?

ಸ. ಸಂಕಲ್ಪಕ್ಕಿಂತ ಹೆಚ್ಚಿನದು ಇದ್ದೇ ಇದೆ.

ನಾ. ಅದನ್ನು ನನಗೆ ಭಗವಾನರು ಹೇಳಿಕೊಡಬೇಕು.

ಇಲ್ಲಿಗೆ ನಾಲ್ಕನೆಯ ಖಂಡ ಮುಗಿದುದು.

* * *

ಐದನೆಯ ಖಂಡ
ಚಿತ್ತ ಬ್ರಹ್ಮ

ಚಿತ್ತಂ ವಾವ ಸಂಕಲ್ಪಾದ್ಭೂಯೋ ಯದಾ ವೈ ಚೇತಯತೇಽಥ ಸಂಕಲ್ಪಯತೇಽಥ ಮನಸ್ಯತ್ಯಥ ವಾಚಮೀರಯತಿ ತಾಮು ನಾಮ್ನೀರಯತಿ ನಾಮ್ನಿ ಮಂತ್ರಾ ಏಕಂ ಭವಂತಿ ಮಂತ್ರೇಷು ಕರ್ಮಾಣಿ ॥ ೧ ॥

ಚಿತ್ತವೇ ಸಂಕಲ್ಪಕ್ಕಿಂತ ಹೆಚ್ಚಿನದು. ಯಾವಾಗ ಚಿತ್ತದ ವ್ಯಾಪಾರವನ್ನು ಮಾಡುವನೋ ಆಗ ಸಂಕಲ್ಪಿಸುತ್ತಾನೆ. ಆಗ ಮನಸ್ಸನ್ನು ಮಾಡುತ್ತಾನೆ. ಆಮೇಲೆ ವಾಕ್ಯನ್ನು ಪ್ರೇರಿಸುತ್ತಾನೆ. ಮತ್ತು ಅದನ್ನು ನಾಮದಲ್ಲಿ ಪ್ರೇರಿಸುತ್ತಾನೆ. ನಾಮದಲ್ಲಿ ಮಂತ್ರಗಳು ಒಂದಾಗುತ್ತವೆ. ಮಂತ್ರಗಳಲ್ಲಿ ಕರ್ಮಗಳು ಒಂದಾಗುತ್ತವೆ.

ವಿ : ಚಿತ್ತ -- ಪ್ರಾಪ್ತವಾದ ಕಾಲಕ್ಕೆ ಅನುರೂಪವಾದ ಅರಿವು ಅತೀತ ಮತ್ತು ಅನಾಗತವಾದ ವಿಷಯಗಳ ಪ್ರಯೋಜನವನ್ನು ನಿರೂಪಣೆ ಮಾಡುವ ಸಾಮರ್ಥ್ಯವು ಚಿತ್ತ.

ತಾನಿ ಹವಾ ಏತಾನಿ ಚತ್ಕೈಕಾಯನಾನಿ ಚಿತ್ತಾತ್ಮಾನಿ ಚಿತ್ತೇ ಪ್ರತಿಷ್ಠಿತಾನಿ ತಸ್ಮಾದ್ಯದ್ಯಪಿ ಬಹುವಿದಚಿತ್ತೋ ಭವತಿ ನಾಯಮಸ್ತೀತ್ಯೇವೈನ ಮಾಹುರ್ಯದಯಂ ವೇದ ಯದ್ಯಾ ಅಯಂ ವಿದ್ವಾನ್ನೇತ್ಥಮಚಿತ್ತಃ ಸ್ಯಾದಿತ್ಯಥ ಯದ್ಯಲ್ಪವಿಚ್ಚಿತ್ತವಾನ್ಭವತಿ ತಸ್ಮಾ ಏವೋತ ಶುಶ್ರೂಷಂತೇ ಚಿತ್ತಂ

ಹ್ಯೇವೈಷಾಮೇಕಾಯನಂ ಚಿತ್ತಮಾತ್ಮಾ ಚಿತ್ತಂ ಪ್ರತಿಷ್ಠಾ ಚಿತ್ತಮುಪಾಸ್ಸ್ವೇತಿ ॥ ೨ ॥

ಇವುಗಳೆಲ್ಲಾ ಚಿತ್ತವನ್ನೇ ಆಯನವನ್ನಾಗಿ ಉಳ್ಳವು ಎಂದರೆ ಚಿತ್ತಕ್ಕೆ ಅನುಸಾರವಾಗಿರುವುವು. ಚಿತ್ತದಿಂದ ಮಾಡಲ್ಪಟ್ಟವು. ಚಿತ್ತದಲ್ಲಿ ಪ್ರತಿಷ್ಠಿತವಾಗಿರುವುವು. ಆದುದರಿಂದ ಒಬ್ಬನು ಬಹಳವನ್ನು ತಿಳಿದವನಾಗಿದ್ದರೂ ಚಿತ್ತವಿಲ್ಲದವನಾದರೆ, 'ಇವನು ಇಲ್ಲ.' ಎಂದೇ ಇವನನ್ನು ಹೇಳುತ್ತಾರೆ. ''ಇವನು ಏನು ಅರಿತಿರುವನೋ ಅದೂ ಇಲ್ಲ. ಇವನು ಅರಿತಿದ್ದರೆ ಹೀಗೆ ಅಚಿತ್ತನಾಗುತ್ತಿರಲಿಲ್ಲ'' ಎಂದು ಅವನನ್ನು ಕುರಿತು ಹೇಳುತ್ತಾರೆ. ಇನ್ನು ಒಬ್ಬನು ಸ್ವಲ್ಪವೇ ತಿಳಿದವನಾದರೂ ಚಿತ್ತವಂತನಾದರೆ ಅವನಿಂದ ಕೇಳಲು ಇಚ್ಛಿಸುವರು. ಇವುಗಳಿಗೆ ಚಿತ್ತವೇ ಏಕಾಯನವಷ್ಟೆ. ಚಿತ್ತವೇ ಆತ್ಮನು. ಚಿತ್ತವೇ ಪ್ರತಿಷ್ಠೆ ಚಿತ್ತವನ್ನು ಉಪಾಸನೆ ಮಾಡು.

ವಿ : ಹಿಂದೆ ನಡೆದದ್ದು, ಮುಂದೆ ನಡೆಯಬಹುದಾದ (ಅತೀತ, ಅನಾಗತ) ವಿಷಯ ಪ್ರಯೋಜನವನ್ನು ಚೆನ್ನಾಗಿ ವಿಚಾರ ಮಾಡುವ ಸಾಮರ್ಥ್ಯ-ಚಿತ್ತ. ಇದರ ಫಲವಾಗಿ 'ಇದನ್ನು ಮಾಡುವುದು ಯುಕ್ತ' ಎಂದು ನಿಶ್ಚಯಿಸುವುದು ಸಂಕಲ್ಪ.

ಸ. ಯಶ್ಚಿತ್ತಂ ಬ್ರಹ್ಮೇತ್ಯುಪಾಸ್ತೇ ಚಿತ್ತಾನ್ಯೇ ಸ ಲೋಕಾನ್ ಧ್ರುವಾನ್ಧ್ರುವಃ ಪ್ರತಿಷ್ಠಿತಾನ್ ಪ್ರತಿಷ್ಠಿತೋಽವ್ಯಥಮಾನಾನವ್ಯಥಮಾನೋಽಭಿಸಿದ್ಧತಿ| ಯಾವಚ್ಚಿತ್ತಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯಶ್ಚಿತ್ತಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವಶ್ಚಿತ್ತಾದ್ಭೂಯ ಇತಿ ಚಿತ್ತಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ೩ ॥

ಯಾವನು ಚಿತ್ತವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ ಅವನು ಉಪಚಿತವಾದ ಧ್ರುವ ಲೋಕಗಳಲ್ಲಿ ಧ್ರುವನಾಗಿ, ಪ್ರತಿಷ್ಠಿತವಾದುದಲ್ಲಿ ಪ್ರತಿಷ್ಠಿತನಾಗಿ ಯಾವ ವ್ಯಥೆಗಳೂ ಸಂಬಂಧಿಸದೆ ಇರುವವನ್ನು ತಾನು ವ್ಯಥೆಯಿಲ್ಲದವನಾಗಿ ಸಾಧಿಸಿಕೊಳ್ಳುತ್ತಾನೆ. ಚಿತ್ತದ ಗತಿ

ಎಲ್ಲಿಯವರೆಗೋ ಅಲ್ಲಿಯವರೆಗೆ ಇವನಿಗೆ ಯಥೇಷ್ಟವಾದ ಸಂಚಾರ ಏರುವುದು. ಇದು ಚಿತ್ತವನ್ನು ಬ್ರಹ್ಮವೆಂದು ಉಪಾಸನೆ ಮಾಡುವವನಿಗೆ ಫಲ

ಭಗವಾನರೆ, ಚಿತ್ತಕ್ಕಿಂತ ಹೆಚ್ಚಿನದು ಇದೆಯೆ?

ಚಿತ್ತಕ್ಕಿಂತ ಹೆಚ್ಚಿನದು ಇದ್ದೇ ಇದೆ.

ಅದನ್ನು ನನಗೆ ಭಗವಾನರು ಹೇಳಿಕೊಡಬೇಕು.

ಇಲ್ಲಿಗೆ ಏದನೆಯ ಖಂಡ ಮುಗಿದುದು.

* * *

ಆರನೆಯ ಖಂಡ
ಧ್ಯಾನ ಬ್ರಹ್ಮ

ಧ್ಯಾನಂ ವಾವ ಚಿತ್ತಾದ್ಭೂಯೋ ಧ್ಯಾಯತೀವ ಪೃಥಿವೀ ಧ್ಯಾಯತೀ ವಾಂತರಿಕ್ಷಂ ಧ್ಯಾಯತೀವ ದ್ಯೌರ್ಧ್ಯಾಯಂತೀವಾಪೋ ಧ್ಯಾಯಂತೀವ ಪರ್ವತಾ ಧ್ಯಾಯಂತೀವ ದೇವಮನುಷ್ಯಾಸ್ತಸ್ಮಾದ್ಯ ಇಹ ಮನುಷ್ಯಾಣಾಂ ಮಹತ್ತಾಂ ಪ್ರಾಪ್ನುವಂತಿ ಧ್ಯಾನಾಪಾದಾಗ್ಂಶಾ ಇವೈವ ತೇ ಭವಂತ್ಯಥ ಯೇಽಲ್ಪಾಃ ಕಲಹಿನಃ ಪಿಶುನಾ ಉಪವಾದಿನಸ್ತೇಽಥ ಯೇ ಪ್ರಭವೋ ಧ್ಯಾನಪಾದಾಗ್ಂಶಾ ಇವೈವ ತೇ ಭವಂತಿ ಧ್ಯಾನಮುಪಾಸ್ಸ್ವೇತಿ || ೧ ||

ಧ್ಯಾನವೇ ಚಿತ್ತಕ್ಕಿಂತ ಹೆಚ್ಚಿನದು. ಪೃಥಿವಿಯು ಧ್ಯಾನಮಾಡುವಂತಿದೆ. ಅಂತರಿಕ್ಷವು ಧ್ಯಾನಮಾಡುವಂತಿದೆ. ದ್ಯುಲೋಕವು ಧ್ಯಾನಮಾಡುವಂತಿದೆ. ಅಪ್ಪು ಧ್ಯಾನ ಮಾಡುವಂತಿದೆ. ಪರ್ವತಗಳು ಧ್ಯಾನ ಮಾಡುವಂತಿವೆ. ದೇವ ಮನುಷ್ಯರು ಧ್ಯಾನ ಮಾಡುವಂತಿದ್ದಾರೆ. ಇಲ್ಲಿ ಮನುಷ್ಯರಲ್ಲಿ ಯಾರು ಮಹತ್ವವನ್ನು ಪಡೆದವರೋ ಅವರು ಧ್ಯಾನದ ಫಲಲಾಭವನ್ನು ಹೊಂದಿದಂತಿದ್ದಾರೆ. ಯಾರು ಅಲ್ಪರಾಗಿರುವರೋ ಅವರು

ಕಲಹ ಮಾಡುವವರು, ಮತ್ತೊಬ್ಬರ ದೋಷವನ್ನು ಆಡುವವರು ಉಪವಾದಿಗಳು ಎಂದರೆ ಮತ್ತೊಬ್ಬರ ಎದುರಿಗೇ ಅವರ ತಪ್ಪನ್ನು ಹೇಳುವವರೂ ಆಗಿರುತ್ತಾರೆ. ಯಾರು ಪ್ರಭುಗಳೋ ಅವರು ಧ್ಯಾನದ ಫಲಲಾಭವನ್ನು ಹೊಂದಿದವರಂತೆ ಇದ್ದಾರೆ. ಧ್ಯಾನವನ್ನು ಬ್ರಹ್ಮವೆಂದು ಉಪಾಸನೆ ಮಾಡು.

ಏ : ಧ್ಯಾನವೆಂದರೆ ಇತರ ಬಗೆಯ ಭಾವನೆಗಳು ನಡುವೆ ಬರದೆ ಇರುವ ಏಕ ಚಿಂತನಾ. ಎಂದರೆ ಏಕಾಗ್ರತಾ.

ಸಯೋ ಧ್ಯಾನಂ ಬ್ರಹ್ಮೇತ್ಯುಪಾಸ್ತೇ ಯಾವತ್ ಧ್ಯಾನಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ಧ್ಯಾನಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ಧ್ಯಾನಾದ್ಭೂಯ ಇತಿ ಧ್ಯಾನಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ || ೨ ||

ಯಾವನು ಧ್ಯಾನವನ್ನು ಬ್ರಹ್ಮವೆಂದು ಉಪಾಸನೆ ಮಾಡುವನೋ ಅವನಿಗೆ ಧ್ಯಾನದ ಗತಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಯಥಾಕಾಮಚಾರವಿರುವುದು. ಯಾವನು ಧ್ಯಾನವನ್ನು ಬ್ರಹ್ಮವೆಂದು ಉಪಾಸಿಸುವನೋ ಅವನಿಗೆ ಈ ಫಲ.

ಭಗವಾನರೆ, ಧ್ಯಾನಕ್ಕಿಂತಲೂ ಹೆಚ್ಚಿನದು ಇದೆಯೆ?

ಧ್ಯಾನಕ್ಕಿಂತಲೂ ಹೆಚ್ಚಿನದು ಇದ್ದೇ ಇದೆ.

ಅದನ್ನು ನನಗೆ ಭಗವಾನರು ತಿಳಿಸಿಕೊಡಬೇಕು.

ಇಲ್ಲಿಗೆ ಆರನೆಯ ಖಂಡ ಮುಗಿದುದು.

* * *

ಏಳನೆಯ ಖಂಡ
ವಿಜ್ಞಾನ ಬ್ರಹ್ಮ

ವಿಜ್ಞಾನಂ ವಾವ ಧ್ಯಾನಾದ್ಭೂಯೋ ವಿಜ್ಞಾನೇನ ವಾ ಋಗ್ವೇದಂ ವಿಜಾನಾತಿ ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸ ಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರ ವಿದ್ಯಾಂ ನಕ್ಷತ್ರ ವಿದ್ಯಾಂ ಸರ್ಪದೇವ ಜನವಿದ್ಯಾಂ ದಿವಂ ಚ ಪೃಥಿವೀಂ ಚ ವಾಯುಂ ಚಾಕಾಶಂ ಚಾಪಶ್ಚ ತೇಜಶ್ಚ ದೇವಾಂಶ್ಚ ಮನುಷ್ಯಾಂಶ್ಚ ಪಶೂಂಶ್ಚ ವಯಾಂಸಿ ಚ ತೃಣವನಸ್ಪತೀಂಶ್ಚ್ವಾಪದಾನ್ಯಾಕೀಟ ಪತಂಗ ಪಿಪೀಲಕಂ ಧರ್ಮಂ ಚಾಧರ್ಮಂಚ ಸತ್ಯಂಚಾನೃತಂ ಚ ಸಾಧು ಚಾಸಾಧು ಚ ಹೃದಯಜ್ಞಂ ಚಾಹೃದಯಜ್ಞಂ ಚಾನ್ನಂಚ ರಸಂ ಚೇಮಂ ಚ ಲೋಕಮಮುಂ ಚ ವಿಜ್ಞಾನೇನೈವ ವಿಜಾನಾತಿ ವಿಜ್ಞಾನಮುಪಾಸ್ಸ್ವೇತಿ || ೧ ||

ವಿಜ್ಞಾನವೇ ಧ್ಯಾನಕ್ಕಿಂತ ಹೆಚ್ಚಿನದು. ವಿಜ್ಞಾನದಿಂದಲೇ ಋಗ್ವೇದವನ್ನು ಅರಿಯುತ್ತಾನೆ ಯಜುರ್ವೇದವನ್ನು ಸಾಮವೇದವನ್ನು ನಾಲ್ಕನೆಯದಾದ ಅಥರ್ವಣ, ಐದನೆಯದಾದ ಇತಿಹಾಸ ಪುರಾಣ, ವೇದಗಳ ವೇದ, ಪಿತ್ರ್ಯ, ರಾಶಿ, ದೈವ, ನಿಧಿ, ವಾಕೋವಾಕ್ಯ, ಏಕಾಯನ, ವೇದವಿದ್ಯೆ, ಬ್ರಹ್ಮ ವಿದ್ಯೆ, ಭೂತವಿದ್ಯೆ, ಕ್ಷತ್ರವಿದ್ಯೆ, ನಕ್ಷತ್ರವಿದ್ಯೆ, ಸರ್ಪದೇವ ಜನ ವಿದ್ಯೆ, ದ್ಯುಲೋಕ, ಪೃಥಿವೀಲೋಕ, ವಾಯು, ಆಕಾಶ, ಅಪ್ಪು, ತೇಜಸ್ಸು ದೇವತೆಗಳು, ಮನುಷ್ಯರು, ಪಶುಗಳು, ಪಕ್ಷಿಗಳು, ತೃಣ, ವನಸ್ಪತಿಗಳು, ಹಿಂಸ್ರ ಮೃಗಗಳು, ಹುಳು, ಚಿಟ್ಟೆ, ಇರುವೆ ವರೆಗೂ ಎಲ್ಲವನ್ನೂ, ಧರ್ಮ ಅಧರ್ಮವನ್ನೂ ಸತ್ಯವನ್ನೂ ಅನೃತವನ್ನೂ, ಒಳ್ಳೆಯದನ್ನೂ ಕೆಟ್ಟದ್ದನ್ನೂ ಮನೋಜ್ಞವಾದುದನ್ನೂ ಅಮನೋಜ್ಞವಾದುದನ್ನೂ ಅನ್ನವನ್ನೂ ರಸವನ್ನೂ ಈ ಲೋಕವನ್ನೂ, ಆ ಲೋಕವನ್ನೂ ವಿಜ್ಞಾನದಿಂದಲೇ ಅರಿಯುತ್ತಾನೆ ವಿಜ್ಞಾನವನ್ನು ಉಪಾಸನೆಮಾಡು.

ವಿ : ವಿಜ್ಞಾನ = ಪ್ರಮಾಣಗಳಿಂದುಂಟಾದ ಜ್ಞಾನ. ಶಾಸ್ತ್ರಾರ್ಥ ವಿಷಯಜ್ಞಾನ . ಇದು ಸ್ಮೃತಿ ಸಂತತಿ ರೂಪವಾದ ಧ್ಯಾನಕ್ಕೆ ಹೇತುವಾಗುತ್ತದೆ.

ಸಯೋ ವಿಜ್ಞಾನಂ ಬ್ರಹ್ಮೇತ್ಯುಪಾಸ್ತೇ ವಿಜ್ಞಾನವತೋ ವೈ ಸ ಲೋಕಾನ್ ಜ್ಞಾನವತೋಽಭಿಸಿಧ್ಯತಿ, ಯಾವದ್ವಿಜ್ಞಾನಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ವಿಜ್ಞಾನಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ವಿಜ್ಞಾನಾದ್ಭೂಯ ಇತಿ ವಿಜ್ಞಾನಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ || ೨ ||

ಯಾವನು ವಿಜ್ಞಾನವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ ಅವನು ವಿಜ್ಞಾನವುಳ್ಳ ಮತ್ತು ಜ್ಞಾನವುಳ್ಳ ಲೋಕಗಳನ್ನು ಪಡೆದು ಕೊಳ್ಳುತ್ತಾನೆ. ಎಲ್ಲಿಯವರೆಗೆ ವಿಜ್ಞಾನವಿರುವುದೋ ಅಲ್ಲಿಯವರೆಗೆ ಯಥಾ ಕಾಮಚಾರವಿರುವುದು. ಯಾವನು ವಿಜ್ಞಾನವನ್ನು ಬ್ರಹ್ಮವೆಂದು ಉಪಾಸಿಸುತ್ತಾನೋ ಅವನಿಗೆ ಈ ಫಲ.

ಭಗವಾನರೆ, ವಿಜ್ಞಾನಕ್ಕಿಂತ ಹೆಚ್ಚಿನದು ಇದೆಯೆ?

ವಿಜ್ಞಾನಕ್ಕಿಂತ ಹೆಚ್ಚಿನದು ಇದ್ದೇ ಇದೆ.

ಭಗವಂತನು ಅದನ್ನು ನನಗೆ ಹೇಳಿಕೊಡಬೇಕು.

ಇಲ್ಲಿಗೆ ಏಳನೆಯ ಖಂಡ ಮುಗಿದುದು.

* * *

ಎಂಟನೆಯ ಖಂಡ
ಬಲ ಬ್ರಹ್ಮ

ಬಲಂ ವಾವ ವಿಜ್ಞಾನಾದ್ಭೂಯೋಽಪಿ ಹ ಶತಂ ವಿಜ್ಞಾನವತಾಮೇಕೋ ಬಲವಾನಾಕಂಪಯತೇ ಸ ಯದಾ ಬಲೀ ಭವತ್ಯಥೋತ್ಥಾತಾ ಭವತ್ಯುತ್ತಿಷ್ಠನ್ ಪರಿಚರಿತಾ ಭವತಿ ಪರಿಚರನ್ನುಪಸತ್ತಾ ಭವತ್ಯುಪ ಸೀದನ್ ದ್ರಷ್ಟಾ ಭವತಿ ಶ್ರೋತಾ ಭವತಿ ಮಂತಾ ಭವತಿ ಬೋದ್ಧಾ ಭವತಿ ಕರ್ತಾ ಭವತಿ ವಿಜ್ಞಾತಾ ಭವತಿ| ಬಲೇನ ವೈ ಪೃಥವೀ ತಿಷ್ಠತಿ ಬಲೇನಾಂತರಿಕ್ಷಂ ಬಲೇನ ದ್ಯೌರ್ಬಲೇನ ಪರ್ವತಾ ಬಲೇನ ದೇವಮನುಷ್ಯಾ ಬಲೇನ ಪಶವಶ್ಚ ವಯಾಂಸಿ ಚ ತೃಣ

ವನಸ್ಪತಯಃ ಶ್ವಾಪದಾನ್ಯಾಕೀಟ ಪತಂಗ ಪಿಪೀಲಕಂ ಬಲೇನ ಲೋಕಸ್ತಿಷ್ಠತಿ ಬಲಮುಪಾಸ್ಸ್ವೇತಿ || ೧ ||

ಬಲವೇ ವಿಜ್ಞಾನಕ್ಕಿಂತ ಹೆಚ್ಚಿನದು. ವಿಜ್ಞಾನವುಳ್ಳ ನೂರು ಮಂದಿಯನ್ನು ಬಲವಿರುವ ಒಬ್ಬನೇ ನಡುಗಿಸುತ್ತಾನೆ. ಅವನು ಯಾವಾಗ ಬಲವುಳ್ಳವನಾಗುತ್ತಾನೆಯೋ ಆಗ ಏಳುತ್ತಾನೆ. ಎದ್ದು ಪರಿಚರಣ ಮಾಡುತ್ತಾನೆ. ಪರಿಚರಣವನ್ನು ಮಾಡಿದರೆ ಉಪಸತ್ತಿ ಮಾಡಿದವ ನಾಗುತ್ತಾನೆ. ಉಪಸದನ ಮಾಡಿದರೆ ಕಾಣುವವನಾಗುತ್ತಾನೆ. ಕೇಳುವವನಾಗುತ್ತಾನೆ. ಆಲೋಚಿಸುವವನಾಗುತ್ತಾನೆ. ತಿಳಿಯುವವ ನಾಗುತ್ತಾನೆ. ಮಾಡುವವನಾಗುತ್ತಾನೆ. ಅರಿತು ಕೊಳ್ಳುವವನಾಗುತ್ತಾನೆ. ಬಲದಿಂದಲೇ ಪೃಥಿವಿಯು ನಿಂತಿದೆ. ಬಲದಿಂದಲೇ ದ್ಯುಲೋಕ, ಬಲದಿಂದಲೇ ಪರ್ವತಗಳು, ಬಲದಿಂದಲೇ ದೇವ ಮನುಷ್ಯರು. ಬಲದಿಂದಲೇ ಪಶು, ಪಕ್ಷಿಗಳು, ತೃಣ ವನಸ್ಪತಿಗಳು, ಹಿಂಸ್ರ ಮೃಗಗಳು, ಕೀಟಗಳು ಚಿಟ್ಟೆಗಳು, ಇರುವೆಗಳು-- ಎಲ್ಲವೂ. ಬಲದಿಂದಲೇ ಲೋಕವು ನಿಂತಿದೆ. ಬಲವನ್ನು ಉಪಾಸನೆ ಮಾಡು.

ವಿ : ಬಲ ಎಂದರೆ ಅನ್ನವನ್ನು ಸೇವಿಸುವುದರಿಂದ ತಿಳಿಯಬೇಕಾದ ವಿಷಯದಲ್ಲಿ ಮನಸ್ಸಿಗೆ ಉಂಟಾಗುವ ಪ್ರತಿಭಾನ ಸಾಮರ್ಥ್ಯ. (ಮನಸ್ಸಿನಲ್ಲಿ ಹೊಳೆಯುವ ಸಾಮರ್ಥ್ಯ)

ಸ ಯೋ ಬಲಂ ಬ್ರಹ್ಮೇತ್ಯುಪಾಸ್ತೇ ಯಾವದ್ ಬಲಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋ ಬಲಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ಬಲಾದ್ಧ್ಯಯ ಇತಿ ಬಲಾದ್ಧ್ಯೇವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ || ೨ ||

ಯಾವನು ಬಲವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೆಯೋ ಅವನಿಗೆ ಎಲ್ಲಿಯವರೆಗೆ ಬಲದ ಗತಿ ಇರುವುದೋ ಅಲ್ಲಿಯವರೆಗೆ ಯಥಾ

ಕಾಮಚಾರವಿರುವುದು. ಇದು ಬಲವನ್ನು ಬ್ರಹ್ಮವೆಂದುಉಪಾಸನೆ ಮಾಡು ವವನಿಗೆ ದೊರಕುವ ಫಲ.

ಭಗವಂತನೆ, ಬಲಕ್ಕಿಂತ ಹೆಚ್ಚಿನದು ಇದೆಯೇ?

ಬಲಕ್ಕಿಂತ ಹೆಚ್ಚಿನದು ಇದ್ದೇ ಇದೆ.

ಭಗವಾನರು ಅದನ್ನು ನನಗೆ ಹೇಳಿಕೊಡಬೇಕು.

ಇಲ್ಲಿಗೆ ಎಂಟನೆಯ ಖಂಡ ಮುಗಿದುದು.

* * *

ಒಂಭತ್ತನೆಯ ಖಂಡ
ಅನ್ನಬ್ರಹ್ಮ

ಅನ್ನಂ ವಾವ ಬಲಾದ್ಭೂಯಸ್ತಸ್ಮಾದ್ಯದ್ಯಪಿ ದಶರಾತ್ರೀರ್ನಾಶ್ನೀಯಾದ್ಯದ್ಯು ಹ ಜೀವೇದಥವಾಽದ್ರಷ್ಟಾಽಶ್ರೋತಾಽಮನ್ತಾಽಬೋದ್ಧಾಽಕರ್ತಾಽವಿಜ್ಞಾತಾ ಭವತ್ಯಥಾನ್ನ ಸ್ಯಾಽಽಯೈ ದ್ರಷ್ಟಾ ಭವತಿ ಶ್ರೋತಾ ಭವತಿ, ಮನ್ತಾ ಭವತಿ ಬೋದ್ಧಾ ಭವತಿ ಕರ್ತಾ ಭವತಿ ವಿಜ್ಞಾತಾ ಭವತ್ಯನ್ನ ಮುಪಾಸ್ಸ್ವೇತಿ || ೧ ||

ಅನ್ನವೇ ಬಲಕ್ಕಿಂತ ಹೆಚ್ಚಿನದು. ಆದುದರಿಂದ ಹತ್ತು ರಾತ್ರಿಗಳು ಊಟ ಮಾಡದೆ, ಆದರೂ ಜೀವಿಸಿಕೊಂಡಿದ್ದರೆ ಅವನು ದ್ರಷ್ಟಾ ಆಗದೆ ಶ್ರೋತಾ ಆಗದೆ ಮನನ ಮಾಡುವವನಾಗದೆ ತಿಳಿಯುವವನಾಗದೆ ಕರ್ತಾ ಆಗದೆ ವಿಜ್ಞಾತಾ ಆಗದೆ ಹೋಗುತ್ತಾನೆ. ಅನ್ನದ ಪ್ರಾಪ್ತಿಯಾದಾಗ ದ್ರಷ್ಟಾ ಆಗುತ್ತಾನೆ; ಶ್ರೋತಾ ಆಗುತ್ತಾನೆ; ಮನನ ಮಾಡುವವನಾಗುತ್ತಾನೆ; ತಿಳಿಯುವವನೂ ಕೆಲಸ ಮಾಡುವವನೂ ವಿಜ್ಞಾತೃವೂ ಆಗುತ್ತಾನೆ. ಆದುದರಿಂದ ಅನ್ನವನ್ನು ಬ್ರಹ್ಮವೆಂದು ಉಪಾಸನೆ ಮಾಡು.

ಏ : ಅನ್ನವು ಬಲವನ್ನುಂಟು ಮಾಡಲು ಕಾರಣವಾದುದರಿಂದ ಬಲಕ್ಕಿಂತ ಹೆಚ್ಚಿನದು.

ಸ ಯೋಽನ್ನಂ ಬ್ರಹ್ಮೇತ್ಯುಪಾಸ್ತೇಽನ್ನವತೋ ಹೈ ಸ ಲೋಕಾನ್ ಪಾನವತೋಽಭಿಸಿದ್ಧ್ಯತಿ ಯಾವದನ್ನಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯೋಽನ್ನಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋಽನ್ನಾದ್ಭೂಯ ಇತ್ಯನ್ನಾದ್ಧಾವ ಭೂಯೋಽಸ್ತೀತಿ ತನ್ಮೇ ಭಗವಾನ್ಬ್ರವೀತ್ವಿತಿ ॥ ೨ ॥

ಯಾವನು ಅನ್ನವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೆಯೋ ಅವನು ಅನ್ನವಿರುವ ಲೋಕಗಳನ್ನು ಪಾನವಿರುವ ಲೋಕಗಳನ್ನು ಸಾಧಿಸಿಕೊಳ್ಳುತ್ತಾನೆ. ಅನ್ನದ ಗತಿ ಎಲ್ಲಿಯವರೆಗಿದೆಯೋ ಅಲ್ಲಿಯವರೆಗೆ ಇವನಿಗೆ ಯಥಾಕಾಮಚಾರ ಇರುವುದು. ಯಾವನು ಅನ್ನವನ್ನು ಬ್ರಹ್ಮವೆಂದು ಉಪಾಸನೆ ಮಾಡುವನೋ ಅವನಿಗೆ ಈ ಫಲ. ''ಭಗವಾನರೇ ! ಅನ್ನಕ್ಕಿಂತ ಹೆಚ್ಚಿನದು ಇದೆಯೇ?'' ''ಅನ್ನಕ್ಕಿಂತ ಹೆಚ್ಚಿನದು ಇದ್ದೇ ಇದೆ.'' ''ಭಗವಾನರು ಅದನ್ನು ನನಗೆ ತಿಳಿಸಿಕೊಡಬೇಕು.

ಎಂಭತ್ತನೆಯ ಖಂಡ ಮುಗಿದುದು.

* * *

ಹತ್ತನೆಯ ಖಂಡ
ಜಲ ಬ್ರಹ್ಮ

ಆಪೋ ವಾವಾನ್ನಾದ್ಭೂಯಸ್ಯಸ್ತಸ್ಮಾದ್ಯದಾ ಸುವೃಷ್ಟಿರ್ನ ಭವತಿ ವ್ಯಾಧೀಯನ್ತೇ ಪ್ರಾಣಾ ಅನ್ನಂ ಕನೀಯೋ ಭವಿಷ್ಯತೀತ್ಯಥ ಯದಾ ಸುವೃಷ್ಟಿರ್ಭವತ್ಯಾನನ್ದಿನಃ ಪ್ರಾಣಾ ಭವನ್ತ್ಯನ್ನಂ ಬಹು ಭವಿಷ್ಯತೀತ್ಯಾಪ ಏವೇಮಾ ಮೂರ್ತಾ ಯೇಯಂ ಪೃಥಿವೀ ಯದನ್ತರಿಕ್ಷಂ ಯದ್ದ್ಯೌರ್ಯತ್ಪರ್ವತಾ ಯದ್ದೇವಮನುಷ್ಯಾ ಯತ್ಪಶವಶ್ಚ ವಯಾಂಸಿ ಚ ತೃಣವನಸ್ಪತಯಃ ಶ್ವಾಪದಾನ್ಯಾಕೀಟ ಪತಂಗ ಪಿಪೀಲಕಮಾಪ ಏವೇಮಾ ಮೂರ್ತಾ ಅಪ ಉಪಾಸ್ಸೇತಿ ॥ ೧ ॥

ಜಲವೇ ಅನ್ನಕ್ಕಿಂತ ಹೆಚ್ಚಿನದು. ಆದುದರಿಂದ, ಯಾವಾಗ ಒಳ್ಳೆಯ ವೃಷ್ಟಿ ಆಗುವುದಿಲ್ಲವೋ ಆಗ ಪ್ರಾಣಗಳು ''ಅನ್ನವು ಕಡಿಮೆಯಾಗುವುದು'', ಎಂದು ದುಃಖಿಗೊಳ್ಳುತ್ತವೆ. ಮತ್ತೆ ಯಾವಾಗ ಒಳ್ಳೆಯ ವೃಷ್ಟಿಯಾಗುವುದೋ ಆಗ, ''ಅನ್ನವು ಬಹುವಾಗಿ ಆಗುವುದು'' ಎಂದು ಪ್ರಾಣಗಳು ಆನಂದ ಗೊಳ್ಳುತ್ತವೆ. ಯಾವ ಈ ಪೃಥಿವೀ ಇದೆಯಲ್ಲಾ, ಯಾವ ಅಂತರಿಕ್ಷ ವಿದೆಯೋ, ಯಾವ ದ್ಯುಲೋಕವಿದೆಯೋ, ಯಾವ ಪರ್ವತಗಳಿವೆಯೋ, ಯಾವ ದೇವ, ಮನುಷ್ಯರುಗಳಿರುವರೋ, ಯಾವ ಪಶುಗಳು, ಮತ್ತು ಪಕ್ಷಿಗಳಿವೆಯೋ, ಯಾವ ತೃಣ, ವನಸ್ಪತಿಗಳಿವೆಯೋ, ಯಾವ ಹಿಂಸ್ರ ಮೃಗಗಳಿವೆಯೋ, ಕೀಟ, ಪತಂಗ, ಇರುವೆಗಳವರೆಗೂ ಇರುವ ಈ ಮೂರ್ತವಾದ ಎಲ್ಲವೂ ಅಪ್ಪೇ! (ಜಲವೇ!) ಆದುದರಿಂದ 'ಅಪ್' ಅನ್ನು ಉಪಾಸನೆ ಮಾಡು.

ಏ : ಬೇರೆಬೇರೆಯಾದ ಮೂರ್ತವಾದ ಆಕಾರಗಳನ್ನು ಹೊಂದಿ ಪರಿಣಾಮಕ್ಕೆ ಗುರಿಯಾಗಿರುವ ಇವೆಲ್ಲವೂ ಮೂರ್ತಗಳು.

ಸ ಯೋಽಪೋ ಬ್ರಹ್ಮೇತ್ಯುಪಾಸ್ತ ಆಪ್ನೋತಿ ಸರ್ವಾನ್ ಕಾಮಾನ್ ತೃಪ್ತಿಮಾನ್ಭವತಿ ಯಾವದಪಾಂ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋಽಪೋ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋಽದ್ಭ್ಯೋ ಭೂಯ ಇತ್ಯದ್ಭ್ಯೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ಬ್ರವೀತ್ವಿತಿ ॥ ೨ ॥

ಯಾವನು ಜಲವನ್ನು ಬ್ರಹ್ಮನೆಂದು ಉಪಾಸನೆ ಮಾಡುವನೋ ಅವನು ಎಲ್ಲಾ ಕಾಮಗಳನ್ನು ಪಡೆದುಕೊಳ್ಳುತ್ತಾನೆ. ತೃಪ್ತಿಯನ್ನು ಹೊಂದಿದ ವನಾಗುತ್ತಾನೆ. ಎಲ್ಲಿಯವರೆಗೆ ಅಪ್ಪಿಗೆ ವ್ಯಾಪ್ತಿ ಇರುವುದೋ ಅಲ್ಲೆಲ್ಲಾ ಅವನಿಗೆ ಯಥಾಕಾಮಚಾರ ಇರುವುದು. ಯಾವನು 'ಅಪ್' ಅನ್ನು ಬ್ರಹ್ಮವೆಂದು ಉಪಾಸನೆ ಮಾಡುವನೋ ಅವನಿಗೆ ಈ ಫಲ.

''ಭಗವಾನರೇ! ಅಪ್ಪಿಗಿಂತ ಹೆಚ್ಚಿನದು ಇದೆಯೆ?''

''ಅಪ್ಪಿಗಿಂತ ಹೆಚ್ಚಿನದು ಇದ್ದೇ ಇದೆ''

''ಅದನ್ನು ಭಗವಾನರು ನನಗೆ ತಿಳಿಸಿಕೊಡಬೇಕು.''

ಹತ್ತನೆಯ ಖಂಡ ಮುಗಿದುದು.

* * *

ಹತ್ತನೆಯ ಖಂಡ
ತೇಜೋ ಬ್ರಹ್ಮ

ತೇಜೋ ವಾವಾದ್ಭ್ಯೋ ಭೂಯಸ್ತದ್ವಾ ಏತದ್ವಾಯುಮಾಗೃಹ್ಯಾಕಾಶಮಭಿತಪತಿ! ತದಾಹುರ್ನಿಶೋಚತಿ ನಿತಪತಿ ವರ್ಷಿಷ್ಯತಿ ವಾ ಇತಿ ತೇಜ ಏವ ತತ್ಪೂರ್ವಂ ದರ್ಶಯಿತ್ವಾऽಥಾಪಃ ಸೃಜತೇ ತದೇತದೂರ್ಧ್ವಾಭಿಶ್ಚ ತಿರಶ್ಚೀಭಿಶ್ಚ ವಿದ್ಯುದ್ಭಿರಾಹ್ರಾದಾಶ್ಚರನ್ತಿ ತಸ್ಮಾದಾಹುರ್ವಿದ್ಯೋತತೇ ಸ್ತನಯತಿ ವರ್ಷಿಷ್ಯತಿ ವಾ ಇತಿ ತೇಜ ಏವ ತತ್ಪೂರ್ವಂ ದರ್ಶಯಿತ್ವಾऽಥಾಪಃ ಸೃಜತೇ ತೇಜ ಉಪಾಸ್ಸೇತಿ || ೧ ||

'ತೇಜಸ್ಸು' 'ಅಪ್ಪು'ಗಿಂತ ಹೆಚ್ಚಿನದು. ಇದು 'ವಾಯು'ವನ್ನು ಹಿಡಿದು ನಿಲ್ಲಿಸಿ ನಿಶ್ಚಲವನ್ನಾಗಿಸಿ ಆಕಾಶದಲ್ಲೆಲ್ಲಾ ತಾಪವನ್ನುಂಟು ಮಾಡುತ್ತದೆ. ಆಗ ''ಬಹಳ ಸೆಖೆಯಾಗಿದೆ, ಬಹಳ ಸುಡುತ್ತದೆ; ಆದುದರಿಂದ ಮಳೆಯು ಅವಶ್ಯಕವಾಗಿ ವರ್ಷಿಸುವುದು'' ಎನ್ನುವರು. ಈ ತೇಜಸ್ಸೇ ಪ್ರಥಮತಃ ತನ್ನನ್ನು ತೋರಿಸಿಕೊಂಡು ಅನಂತರ 'ಅಪ್ಪ'ನ್ನು ಸೃಜಿಸುತ್ತದೆ. 'ಅಪ್ಪು'ಗೆ 'ತೇಜಸ್ಸೇ' ಕಾರಣವಾದುದರಿಂದ ಮೇಲುಗಡೆ ಹೋಗುವ ಮತ್ತು ಅಡ್ಡಡ್ಡಲಾಗಿ ಹೋಗುವ ಮಿಂಚುಗಳಿಂದ ಕೂಡಿದ ಗುಡುಗುಗಳು ಸಂಚರಿಸುತ್ತವೆ. ಆದ್ದರಿಂದ ''ಮಿಂಚುತ್ತಿದೆ; ಗುಡುಗುತ್ತಿದೆ; ಮಳೆಗರೆದೇ ತೀರುವುದು'' ಎಂದು ಹೇಳುತ್ತಾರೆ. ಆ ತೇಜಸ್ಸು ತನ್ನನ್ನು ಮೊದಲು ತೋರಿಸಿ ಕೊಂಡು ಅನಂತರ ಜಲವನ್ನು ಸೃಷ್ಟಿಸುತ್ತದೆ. ತೇಜಸ್ಸನ್ನು ಬ್ರಹ್ಮವೆಂದು ಉಪಾಸನೆ ಮಾಡು.

ಸ ಯಸ್ತೇಜೋ ಬ್ರಹ್ಮೇತ್ಯುಪಾಸ್ತೇ ತೇಜಸ್ವೀ ವೈ ಸ ತೇಜಸ್ವತೋ ಲೋಕಾನ್ಪ್ರಾಪ್ನೋತೋऽಪಹತತಮಸ್ಕಾನಭಿಸಿಧ್ಯತಿ ಯಾವತ್ತೇಜಸೋ ಗತಂ

ತತ್ರಾಸ್ಯ ಯಥಾಕಾಮಚಾರೋ ಭವತಿ| ಯಸ್ತೇಜೋ ಬ್ರಹ್ಮೇತ್ಯುಪಾಸ್ತೇऽಸ್ತಿ ಭಗವಸ್ತೇಜಸೋ ಭೂಯ ಇತಿ ತೇಜಸೋ ವಾವ ಭೂಯೋऽಸ್ತೀತಿ ತನ್ಮೇ ಭಗವಾನ್ಬ್ರವೀತ್ವಿತಿ || ೨ ||

ಯಾವನು ತೇಜಸ್ಸನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ ಅವನು ತೇಜಸ್ವಿಯೇ ಆಗುತ್ತಾನೆ. ತೇಜಸ್ಸನ್ನು ಹೊಂದಿರುವ ಹಾಗು ಭಾಸ್ವತ್ವವನ್ನು ಹೊಂದಿರುವ, ಬಾಹ್ಯಾಂತರ ಅಂಧಕಾರ ಶೂನ್ಯವಾದ ಲೋಕಗಳನ್ನು ಪಡೆದುಕೊಳ್ಳುತ್ತಾನೆ. ತೇಜಸ್ಸಿನ ಗತಿ ಎಲ್ಲಿಯವರೆಗೆ ಇದೆಯೋ ಅಲ್ಲೆಲ್ಲಾ ಅವನು ಯಥಾಕಾಮಚಾರಿಯಾಗಿರುತ್ತಾನೆ. ತೇಜಸ್ಸನ್ನು ಬ್ರಹ್ಮವೆಂದು ಉಪಾಸನೆ ಮಾಡುವವನಿಗೆ ಈ ಫಲ.

''ಭಗವನ್ತನೇ, ತೇಜಸ್ಸಿಗಿಂತ ಹೆಚ್ಚಿನದು ಇದೆಯೇ?''

''ತೇಜಸ್ಸಿಗಿಂತ ಹೆಚ್ಚಿನದು ಇದ್ದೇ ಇದೆ.''

''ಭಗವಾನರು ಅದನ್ನು ನನಗೆ ತಿಳಿಸಿಕೊಡಬೇಕು''

ಹನ್ನೊಂದನೆಯ ಖಂಡ ಮುಗಿದುದು

* * *

ಹನ್ನೆರಡನೆಯ ಖಂಡ
ಆಕಾಶ ಬ್ರಹ್ಮ

ಆಕಾಶೋ ವಾವ ತೇಜಸೋ ಭೂಯಾನಾಕಾಶೇ ವೈ ಸೂರ್ಯಾಚನ್ದ್ರಮಸಾವುಭೌ ವಿದ್ಯುನ್ನಕ್ಷತ್ರಾಣ್ಯಗ್ನಿರಾಕಾಶೇನಾಹ್ವಯತ್ಯಾಕಾಶೇನ ಶೃಣೋತ್ಯಾಕಾಶೇನ ಪ್ರತಿಶೃಣೋತ್ಯಾಕಾಶೇ ರಮತ ಆಕಾಶೇ ನ ರಮತ ಆಕಾಶೇ ಜಾಯತ ಆಕಾಶಮಭಿಜಾಯತ ಆಕಾಶಮುಪಾಸ್ಸೇತಿ || ೧ ||

ಆಕಾಶವೇ ತೇಜಸ್ಸಿಗಿಂತ ಹೆಚ್ಚಿನದು. ಆಕಾಶದಲ್ಲಿಯೇ ಸೂರ್ಯ ಚಂದ್ರರಿಬ್ಬರೂ, ಮಿಂಚು, ನಕ್ಷತ್ರಗಳು ಮತ್ತು ಅಗ್ನಿ, ಆಕಾಶದಿಂದಲೇ

ಕರೆಯುತ್ತಾನೆ. ಆಕಾಶದಿಂದಲೇ ಕೇಳುತ್ತಾನೆ, ಒಬ್ಬನ ಶಬ್ದವನ್ನು ಮತ್ತೊಬ್ಬನು ಕೇಳುತ್ತಾನೆ. ಆಕಾಶದಲ್ಲಿಯೇ ರಮಿಸುತ್ತಾನೆ ಆಕಾಶದಲ್ಲಿಯೇ ಶೋಚಿಸುತ್ತಾನೆ. ಆಕಾಶದಲ್ಲಿಯೇ ಹುಟ್ಟುತ್ತಾನೆ ಆಕಾಶದ ಕಡೆಗೆ ಬೆಳೆಯುತ್ತದೆ. ಆಕಾಶವನ್ನು 'ಬ್ರಹ್ಮ' ವೆಂದು ಉಪಾಸನೆ ಮಾಡು.

ವಿ : ಆಕಾಶವು ತೇಜಸ್ಸು ಮತ್ತು ವಾಯುಗಳಿಗೆ ಕಾರಣ. ಆದುದರಿಂದ ಆಕಾಶವು ತೇಜಸ್ಸು ಮತ್ತು ವಾಯು ಇವುಗಳಿಗಿಂತ ಹೆಚ್ಚಿನದು. ಆಹ್ವಾನ, ಶ್ರವಣ ಮೊದಲಾದವು ಆಕಾಶದ ಕಾರಣದಿಂದಲೇ ಸಾಧ್ಯವಾಗಿವೆ. ಹುಟ್ಟುವ ಅಂಕುರಾದಿಗಳು ಆಕಾಶವನ್ನೇ ಕುರಿತು ಬೆಳೆಯುತ್ತವೆ.

ಸ ಯ ಆಕಾಶಂ ಬ್ರಹ್ಮೇತ್ಯುಪಾಸ್ತ ಆಕಾಶವತೋ ವೈ ಸ ಲೋಕಾನ್ಪ್ರಕಾಶವತೋಽಸಂಬಾಧಾನುರುಗಾಯವತೋಽಭಿಸಿದ್ಧ್ಯತಿ ಯಾವದಾಕಾಶಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯ ಆಕಾಶಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವ ಆಕಾಶಾದ್ಭೂಯ ಇತ್ಯಾಕಾಶಾದ್ವಾವ ಭೂಯೋಽಸ್ತೀತಿ ತನ್ಮೇಭಗವಾನ್ಬ್ರವೀತ್ವಿತಿ ॥ ೨ ॥

ಯಾವನು ಆಕಾಶವನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ ಅವನು ವಿಸ್ತಾರಯುಕ್ತವಾದ, ಪ್ರಕಾಶಯುತವಾದ, ಪರಸ್ಪರ ಪೀಡೆಯ ರೂಪದ ಸಂಬಾಧವಿಲ್ಲದ, ಕೀರ್ತಿಯುಕ್ತವಾದ ಲೋಕಗಳನ್ನು ಪಡೆದು ಕೊಳ್ಳುತ್ತಾನೆ. ಎಲ್ಲಿಯವರೆಗೆ ಆಕಾಶದ ಗತಿ ಇರುವುದೋ ಅಲ್ಲಿಯವರೆಗೂ ಇವನಿಗೆ ಯಥಾಕಾಮಚಾರವಿರುತ್ತದೆ. ಇದು ಆಕಾಶವನ್ನು ಬ್ರಹ್ಮವೆಂದು ಉಪಾಸನೆ ಮಾಡುವವನಿಗೆ ಲಭಿಸುವ ಫಲ.

''ಭಗವಾನರೇ ಆಕಾಶಕ್ಕಿಂತ ಹೆಚ್ಚಿನದು ಇದೆಯೇ?''

''ಆಕಾಶಕ್ಕಿಂತ ಹೆಚ್ಚಿನದು ಇದ್ದೇ ಇದೆ''

''ಭಗವಾನರೇ, ಅದನ್ನು ನನಗೆ ತಿಳಿಸಿಕೊಡಬೇಕು.''

ಹನ್ನೆರಡನೆಯ ಖಂಡ ಮುಗಿದುದು

* * *

ಹದಿಮೂರನೆಯ ಖಂಡ
ಸ್ಮರ ಬ್ರಹ್ಮ

ಸ್ಮರೋ ವಾವಾಕಾಶಾದ್ಭೂಯಸ್ತಸ್ಮಾದ್ಯದ್ಯಪಿ ಬಹವ ಆಸೀರನ್ನ ಸ್ಮರನ್ತೋ ನೈವ ತೇ ಕಂಚನ ಶೃಣುಯುರ್ನ ಮನ್ವೀರನ್ನ ವಿಜಾನೀರನ್ಯದಾ ವಾವ ತೇ ಸ್ಮರೇಯು ರಥ ಶೃಣುಯುರಥ ಮನ್ವೀರನ್ನಥ ವಿಜಾನೀರನ್ಸ್ಮರೇಣ ವೈ ಪುತ್ರಾನ್ವಿಜಾನಾತಿ ಸ್ಮರೇಣ ಪಶೂನ್ಸ್ಮರಮುಪಾಸ್ಸೇತಿ ॥ ೧ ॥

ಸ್ಮರವೇ ಆಕಾಶಕ್ಕಿಂತ ಹೆಚ್ಚಿನದು. ಆದುದರಿಂದ ಸ್ಮರಣೆ ಇಲ್ಲದ ಅನೇಕಜನ ಕುಳಿತಿದ್ದರೂ ಅವರು ಏನನ್ನೂ ಶ್ರವಣ ಮಾಡಲಾರರು, ಮನನಮಾಡಲಾರರು; ತಿಳಿಯಲಾರರು; ಯಾವಾಗ ಅವರು ಸ್ಮರಣೆ ಮಾಡುವರೋ ಆಗ ಶ್ರವಣ ಮಾಡಿಯಾರು, ಮನನ ಮಾಡಿಯಾರು, ಅರಿತುಕೊಂಡಾರು. ಸ್ಮರದಿಂದಲೇ ಪುತ್ರರನ್ನು ತಿಳಿಯುತ್ತಾನೆ. ಸ್ಮರ ದಿಂದಲೇ ಪಶುಗಳನ್ನೇ ಅರಿತು ಕೊಳ್ಳುತ್ತಾನೆ. ಸ್ಮರವನ್ನು ಬ್ರಹ್ಮವೆಂದು ಉಪಾಸನೆ ಮಾಡು.

ವಿ : 'ಸ್ಮರಃ' ಎಂದರೆ ಸ್ಮರಣೆ. ಸ್ಮರಣೆಯಿಂದಲೇ ಶ್ರವಣ ಮೊದಲಾದ ಕಾರ್ಯದಲ್ಲಿ ಸಮರ್ಥರಾಗುತ್ತಾರೆ. ಇವೆಲ್ಲವೂ ಸ್ಮರಣೆಗೆ ಅಧೀನವಾದುವು. ಆದುದರಿಂದ ಆಕಾಶಕ್ಕಿಂತಲೂ ಇದ್ದಕ್ಕೆ ಹೆಚ್ಚಳ ಇದೆ.

ಸ ಯಃ ಸ್ಮರಂ ಬ್ರಹ್ಮೇತ್ಯುಪಾಸ್ತೇ ಯಾವತ್ ಸ್ಮರಸ್ಯ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯಃ ಸ್ಮರಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವಃ ಸ್ಮರಾದ್ಭೂಯ ಇತಿ ಸ್ಮರಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ಬ್ರವೀತ್ವಿತಿ ॥ ೨ ॥

ಯಾವನು ಸ್ಮರವನ್ನು ಬ್ರಹ್ಮವೆಂದು ಉಪಾಸನೆ ಮಾಡುವನೋ ಅವನಿಗೆ ಸ್ಮರದ ವ್ಯಾಪ್ತಿ ಇರುವೆಡೆಯಲ್ಲೆಲ್ಲಾ ಯಥಾ ಕಾಮಚಾರವಿರುತ್ತದೆ. ಇದು ಸ್ಮರವನ್ನು ಬ್ರಹ್ಮವೆಂದು ಉಪಾಸನೆ ಮಾಡುವವನಿಗೆ ದೊರಕುವ ಫಲ.

''ಭಗವಾನರೇ,! ಸ್ಮರಕ್ಕಿಂತ ಹೆಚ್ಚಿನದು ಇದೆಯೇ?''

''ಸ್ಮರಕ್ಕಿಂತ ಹೆಚ್ಚಿನದು ಇದ್ದೇ ಇದೆ.''

''ಹಾಗಾದರೆ ಭಗವಾನರು ಅದನ್ನು ನನಗೆ ತಿಳಿಸಿಕೊಡಬೇಕು.''

ಹದಿಮೂರನೆಯ ಖಂಡ ಮುಗಿದುದು.

* * *

ಹದಿನಾಲ್ಕನೆಯ ಖಂಡ
ಆಶಾ ಬ್ರಹ್ಮ

ಆಶಾ ವಾವ ಸ್ಮರಾದ್ಭೂಯಸ್ಯಾಶೇದ್ಧೋ ವೈ ಸ್ಮರೋ ಮನ್ತ್ರಾನಧೀತೇ ಕರ್ಮಾಣಿ ಕುರುತೇ ಪುತ್ರಾಂಶ್ಚ ಪಶೂಂಶ್ಚೇಚ್ಛತ ಇಮಂ ಚ ಲೋಕಮಮುಂ ಚೇಚ್ಛತ ಆಶಾಮುಪಾಸ್ಸ್ವೇತಿ ॥ ೧ ॥

ಆಶೆಯು ಸ್ಮರಕ್ಕಿಂತ ಹೆಚ್ಚಿನದು. ಫಲೇಚ್ಛೆಯಿಂದ ದೀಪಿತನಾದವನಲ್ಲವೇ ಸ್ಮರನಾಗಿ ಮಂತ್ರಗಳನ್ನು ಅಧ್ಯಯನ ಮಾಡುತ್ತಾನೆ, ಕರ್ಮಗಳನ್ನು ಮಾಡುತ್ತಾನೆ, ಪುತ್ರರನ್ನೂ ಪಶುಗಳನ್ನೂ ಇಚ್ಛಿಸುತ್ತಾನೆ. ಈ ಲೋಕವನ್ನು ಆ ಲೋಕವನ್ನು ಇಚ್ಛಿಸುತ್ತಾನೆ. ಆಶೆಯನ್ನು 'ಬ್ರಹ್ಮ'ವೆಂದು ಉಪಾಸನೆ ಮಾಡು.

ವಿ : ಆಶೆ ಎಂಬುದು ಅಪ್ರಾಪ್ತವಾದ ವಸ್ತುವನ್ನು ಪಡೆಯುವ ಆಕಾಂಕ್ಷೆ.

ಸ ಯ ಆಶಾಂ ಬ್ರಹ್ಮೇತ್ಯುಪಾಸ್ತ ಆಶಯಾಸ್ಯ ಸರ್ವೇಕಾಮಾಃ ಸಮೃದ್ಧ್ಯನ್ತ್ಯಮೋಘಾ ಹಾಸ್ಯಾಶಿಷೋ ಭವನ್ತಿ ಯಾವದಾಶಾಯಾ ಗತಂ ತತ್ರಾಸ್ಯ ಯಥಾಕಾಮಚಾರೋ ಭವತಿ ಯ ಆಶಾಂ ಬ್ರಹ್ಮೇತ್ಯುಪಾಸ್ತೇऽಸ್ತಿ ಭಗವ ಆಶಾಯಾ ಭೂಯ ಇತ್ಯಾಶಾಯಾ ವಾವ ಭೂಯೋऽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ೨ ॥

ಯಾವನು ಆಶೆಯನ್ನು ಬ್ರಹ್ಮವೆಂದು ಉಪಾಸನೆ ಮಾಡುತ್ತಾನೋ ಅವನ ಎಲ್ಲ ಕಾಮಗಳೂ ಆಶೆಯಿಂದ ಸಮೃದ್ಧವಾಗುತ್ತವೆ. ಅವನ ಆಶೆಗಳು ಸಫಲವಾಗುತ್ತವೆ. ಎಲ್ಲಿಯವರೆಗೆ ಆಶೆಯಗತಿ ಇರುವುದೋ ಅಲ್ಲೆಲ್ಲಾ ಅವನು ಯಥಾಕಾಮಚಾರನಾಗುತ್ತಾನೆ. ಇದು ಆಶೆಯನ್ನು ಬ್ರಹ್ಮವೆಂದು ಉಪಾಸನೆ ಮಾಡುವವನ ಫಲ.

''ಭಗವಾನರೇ, ಆಶೆಗಿಂತಲೂ ಹೆಚ್ಚಿನದು ಇದೆಯೇ?''

''ಆಶೆಗಿಂತ ಹೆಚ್ಚಿನದು ಇದ್ದೇ ಇದೆ.''

''ಅದನ್ನು ನನಗೆ ಭಗವಾನರು ತಿಳಿಸಿಕೊಡಬೇಕು.''

ಹದಿನಾಲ್ಕನೆಯ ಖಂಡ ಮುಗಿದುದು.

* * *

ಹದಿನೈದನೆಯ ಖಂಡ
ಪ್ರಾಣ ಬ್ರಹ್ಮ

ಪ್ರಾಣೋ ವಾ ಆಶಾಯಾ ಭೂಯಾನ್ಯಥಾ ವಾ ಅರಾ ನಾಭೌ ಸಮರ್ಪಿತಾ ಏವಮಸ್ಮಿನ್ಪ್ರಾಣೇ ಸರ್ವಂ ಸಮರ್ಪಿತಮ್ ಪ್ರಾಣಃ ಪ್ರಾಣೇನ ಯಾತಿ ಪ್ರಾಣಃ ಪ್ರಾಣಂ ದದಾತಿ ಪ್ರಾಣಾಯ ದದಾತಿ ಪ್ರಾಣೋ ಹ ಪಿತಾ ಪ್ರಾಣೋ ಮಾತಾ ಪ್ರಾಣೋ ಭ್ರಾತಾ ಪ್ರಾಣಃ ಸ್ವಸಾ ಪ್ರಾಣ ಆಚಾರ್ಯಃ ಪ್ರಾಣೋ ಬ್ರಾಹ್ಮಣಃ ॥ ೧ ॥

ಪ್ರಾಣನು ಆಶೆಗಿಂತ ಹೆಚ್ಚಿನವನು. ಹೇಗೆ ಹಾರೆಕೋಲುಗಳು ಗುಂಬದಲ್ಲಿ ಸೇರಿಕೊಂಡಿರುತ್ತವೆಯೋ ಹಾಗೆ ಈ ಪ್ರಾಣನಲ್ಲಿ ಎಲ್ಲವೂ ಸೇರಿಕೊಂಡಿರುತ್ತದೆ. ಪ್ರಾಣನು ಪ್ರಾಣದಿಂದಲೇ ಹೋಗುತ್ತಾನೆ; ಪ್ರಾಣನು ಪ್ರಾಣವನ್ನು ಕೊಡುತ್ತಾನೆ; ಪ್ರಾಣನಿಗೆ ಕೊಡುತ್ತಾನೆ, ಪ್ರಾಣನೇ ತಂದೆ ಪ್ರಾಣನೇ ತಾಯಿ; ಪ್ರಾಣನೇ ಸೋದರ; ಪ್ರಾಣನೇ ಸೋದರಿ; ಪ್ರಾಣನೇ ಆಚಾರ್ಯ; ಪ್ರಾಣನೇ ಬ್ರಾಹ್ಮಣನು.

ವಿ : ಇಲ್ಲಿ ಪ್ರಾಣ ಶಬ್ದದಿಂದ ಪ್ರಾಣ ಸಹಚರಿತನಾದ ಜೀವಾತ್ಮನನ್ನು ಬೋಧಿಸಿದೆ. ಹೇಗೆ ರಥ ಚಕ್ರದ ಆರೆ ಕಾಲುಗಳು ನಾಭಿಯನ್ನು ಆಶ್ರಯಿಸಿರುವುವೋ ಹಾಗೆ ಎಲ್ಲಾ ಅಚೇತನವಾದ ಭೂತಜಾತಗಳೂ ಈ ಚೇತನನನ್ನು ಆಶ್ರಯಿಸಿವೆ ಎಂಬ ಭಾವ. ''ಪ್ರಾಣಃ ಪ್ರಾಣೇನ ಯಾತಿ'' ಮೊದಲಾದುವುಗಳ ಭಾವ ಇದು - ಗಮನ ಮಾಡುವ ದೇವದತ್ತ ಮೊದಲಾದವರುಗಳು ಜೀವರುಗಳೇ. ಗಮನಕ್ಕೆ ಸಾಧನವಾದ ಅಶ್ವಾದಿಗಳೂ ಜೀವರೇ, ಕೊಡುವ ದಾತಾ ಜೀವನೇ. ದಾನಮಾಡಲ್ಪಡುವ ಪಶು ಮೊದಲಾದವು ಜೀವನೇ. ಯಾರಿಗೆ ಕೊಡುವರೋ ಅಂತಹ ಬ್ರಾಹ್ಮಣಾದಿಗಳೂ ಜೀವರುಗಳೇ. ತಾಯಿ, ತಂದೆ ಮೊದಲಾದವರೆಲ್ಲರೂ ಜೀವರುಗಳೇ ಎಂದು ಇದರ ತಾತ್ಪರ್ಯ.

ಸ ಯದಿ ಪಿತರಂ ವಾ ಮಾತರಂ ವಾ ಭ್ರಾತರಂ ವಾ ಸ್ವಸಾರಂ ವಾಚಾರ್ಯಂ ವಾ ಬ್ರಾಹ್ಮಣಂ ವಾ ಕಂಚಿದ್ಭ್ರಶಮಿವ ಪ್ರತ್ಯಾಹ ಧಿಕ್ತ್ವಂಽಸಿ ತ್ವೇವೈನಮಾಹುಃ ಪಿತೃಹಾ ವೈ ತ್ವಮಸಿ ಮಾತೃಹಾ ವೈ ತ್ವಮಸಿ ಭ್ರಾತೃಹಾ ವೈ ತ್ವಮಸಿ ಸ್ವಸೃಹಾ ವೈ ತ್ವಮಸಿ ಆಚಾರ್ಯಹಾ ವೈ ತ್ವಮಸಿ ಬ್ರಾಹ್ಮಣಹಾ ವೈ ತ್ವಮಸೀತಿ || ೨ ||

ಆತನು ತಂದೆಯನ್ನಾಗಲಿ, ತಾಯಿಯನ್ನಾಗಲಿ, ಒಡಹುಟ್ಟಿದವನನ್ನಾಗಲಿ, ಸೋದರಿಯನ್ನಾಗಲಿ, ಆಚಾರ್ಯನನ್ನಾಗಲಿ, ಬ್ರಾಹ್ಮಣನನ್ನಾಗಲಿ ಒಂದಿಷ್ಟು ಅಧಿಕ್ಷೇಪ ಮಾಡಿ ಮಾತನಾಡಿದರೆ ಅವನನ್ನು (ಪಕ್ಕದಲ್ಲಿರುವವರು) ''ನಿನಗೆ ಧಿಕ್ಕಾರವಿರಲಿ'' ಎಂದೇ ಹೇಳುವರು. ನೀನು ಪಿತೃಹತ್ಯ ಮಾಡಿದವನಾಗಿದ್ದಿಯೆ; ಮಾತೃ ಹತ್ಯ ಮಾಡಿದವನಾಗಿದ್ದೀಯೆ; ಭ್ರಾತೃಹತ್ಯ ಮಾಡಿದವನಾಗಿದ್ದೀಯೇ ಒಡಹುಟ್ಟಿದವಳ ಹತ್ಯ ಮಾಡಿದವನಾಗಿದ್ದೀಯೆ. ಆಚಾರ್ಯ ಹತ್ಯೆ ಮಾಡಿದವನಾಗಿದ್ದೀಯೆ,. ಬ್ರಾಹ್ಮಣಹತ್ಯೆ ಮಾಡಿದವನಾಗಿದ್ದೀಯೇ ಎಂದೇ ಹೇಳುವರು.

ವಿ : ''ಕಣ್ಣಿಗೆ ಕಂಡುಬರುವ ಮಾಂಸಪಿಂಡ ವಿಶೇಷಾದಿಗಳೇ ಪಿತಾ ಮೊದಲಾದ ಶಬ್ದಗಳಿಂದ ಹೇಳಲ್ಪಡುತ್ತವೆ. ಜೀವರುಗಳಲ್ಲ'' ಎಂದು

ತಿಳಿಯುವವರಿಗೆ ಇಲ್ಲಿ ಉತ್ತರವನ್ನು ಹೇಳಿದೆ. ಜೀವನೊಡನೆ ಕೂಡಿರುವ ಪಿತ್ರಾದಿ ಶರೀರಗಳನ್ನು ''ನಿನಗೆ ಧಿಕ್ಕಾರವಿರಲಿ'' ಎಂದೆಂದು ಹೆಚ್ಚಾಗಿ ಅಧಿಕ್ಷೇಪ ಮಾಡುತ್ತಾರೆ. ಅಂತಹವರನ್ನು ಕುರಿತು ಪಿತೃಹಾ, ಮಾತೃಹಾ ಎಂಬ ಶಬ್ದಗಳನ್ನು ಬಳಸುತ್ತಾರೆ.

ಪಿತಾ ಮೊದಲಾದ ಶಬ್ದಗಳಿಂದ ಕೇವಲ ಆಯಾ ದೇಹ ವಿಶೇಷಗಳನ್ನು ಹೇಳುವುದಿಲ್ಲ. ಜೀವನೊಡನೆ ಕೂಡಿದ ದೇಹ ವಿಶೇಷಗಳಿಗೆ ಆಯಾ ಶಬ್ದಗಳು ಅನ್ವಯಿಸುತ್ತವೆ. ಆದ್ದರಿಂದ ಜೀವನನ್ನೇ ಆ ಶಬ್ದಗಳು ಹೇಳುತ್ತವೆ.

ಅಥ ಯದ್ಯಪ್ಯೇನಾಸುತ್ಕ್ರಾಮ್ಯನ್ತಂ ಪ್ರಾಣಾನ್ ಶೂಲೇನ ಸಮಾಸಂ ವ್ಯತಿಷಂದಹೇನ್ನೈವೈನಂ ಬ್ರೂಯುಃ ಪಿತೃಹಾಽಸೀತಿ ನ ಮಾತೃಹಾಽಸೀತಿ ನ ಭ್ರಾತೃಹಾಽಸೀತಿ ನ ಸ್ವಸೃಹಾಽಸೀತಿ ನಾಚಾರ್ಯಹಾಽಸೀತಿ ನ ಬ್ರಾಹ್ಮಣ ಹಾಽಸೀತಿ || ೩ ||

ಉತ್ಕ್ರಾಂತ ಜೀವರಾದ ಇವರನ್ನು ಶೂಲದಲ್ಲಿ ಹಾಕಿ ಬೇರೆ ಬೇರೆಯಾಗಿ ಸುಟ್ಟರೂ ಇವನನ್ನು ''ಪಿತೃಹತ್ಯೆ ಮಾಡಿದವನಾಗಿದ್ದೀಯೆ'' ಎನ್ನುವುದಿಲ್ಲ. 'ಮಾತೃಹತ್ಯ ಮಾಡಿದವನಾಗಿದ್ದೀಯೇ' ಎನ್ನುವುದಿಲ್ಲ. 'ಭಾತೃಹತ್ಯ ಮಾಡಿದವನಾಗಿದ್ದೀಯೆ' ಎನ್ನುವುದಿಲ್ಲ. 'ಸ್ವಸೃ ಹತ್ಯ ಮಾಡಿದವನಾಗಿದ್ದೀಯೆ' ಎನ್ನುವುದಿಲ್ಲ. 'ಆಚಾರ್ಯಹತ್ಯೆ ಮಾಡಿದವನಾಗಿದ್ದೀಯೆ' ಎನ್ನುವುದಿಲ್ಲ. 'ಬ್ರಾಹ್ಮಣಹತ್ಯೆ ಮಾಡಿದವನಾಗಿದ್ದೀಯೆ' ಎನ್ನುವುದಿಲ್ಲ.

ವಿ : ಜೀವರುಗಳು ಹೊರಹೊರಟ ಮೇಲೆ ಅದೇ ಶರೀರಗಳನ್ನು ಶೂಲಕ್ಕೆ ಹಾಕಿದರೂ ದಹನ ಮಾಡಿದರೂ ಅಂಥವನನ್ನು ಪಿತೃಹಾ ಎಂದು ಹೇಳುವುದಿಲ್ಲ ಆದುದರಿಂದ ಪಿತೃ, ಮಾತೃ ಮೊದಲಾದ ಶಬ್ದಗಳು ಜೀವನು ಇರುತ್ತಿರುವ ಆಯಾ ಶರೀರಗಳಿಗೆ ಅನ್ವಯಿಸುತ್ತವೆ.

ಪ್ರಾಣೋ ಹ್ಯೇವೈತಾನಿ ಸರ್ವಾಣಿ ಭವತಿ ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ ಅತಿವಾದೀ ಭವತಿ ತಂ ಚೇದ್ ಬ್ರೂಯುರತಿವಾದ್ಯಸೀತ್ಯತಿವಾದ್ಯಸ್ಮೀತಿ ಬ್ರೂಯಾನ್ನಾಪಹ್ನುವೀತ ॥ ೪ ॥

ಪ್ರಾಣನೇ ಇವೆಲ್ಲವೂ ಆಗಿದ್ದಾನೆ. ಯಾವನು ಹೀಗೆಂದು ಕಂಡುಕೊಂಡು ಹೀಗೆ ಮನನ ಮಾಡುವವನಾಗಿ ಹೀಗೆ ತಿಳಿದುಕೊಂಡವನಾಗಿ ಆಗುವನೋ ಅವನು 'ಅತಿ ವಾದಿ'ಯಾಗುವನು; ಅವನನ್ನು ಕುರಿತು ''ನೀನು ಅತಿವಾದಿಯಾಗಿರುವೆ'' ಎಂದು ಯಾರಾದರೂ ಹೇಳುವುದಾದರೆ, ಅವನು ''ಅತಿವಾದಿಯಾಗಿರುವೆನು'' ಎಂದೇ ಹೇಳಬೇಕು. ಅಲ್ಲಗಳೆಯಬಾರದು.

ವಿ : ಇಲ್ಲಿ ಪ್ರಾಣಶಬ್ದದಿಂದ ಹೇಳಲ್ಪಟ್ಟಿರುವವನು ಜೀವಾತ್ಮನು. ಜೀವಾತ್ಮನು ಪ್ರಾಣ ಸಹಚಾರಿ. ಈ ಪ್ರಾಣವು ವಾಯುವಿಶೇಷ ಮಾತ್ರವಲ್ಲ. ಜೀವನೊಡಗೂಡಿರುವಾಗ ಪಿತ್ರಾದಿಗಳನ್ನು ಹಿಂಸಿಸಿದರೆ ಪಿತೃಹಾ ಎಂದು ಶಬ್ದಪ್ರಯೋಗ ಮಾಡುತ್ತಾರೆ. ಜೀವರಹಿತರಾದಾಗ ಹಿಂಸಿಸಿದರೆ ಹಾಗೆ ಶಬ್ದಪ್ರಯೋಗ ಮಾಡುವುದಿಲ್ಲ. ಆದುದರಿಂದ ನಿರ್ಜೀವರಾದ ಶರೀರಕ್ಕೆ ಪಿತ್ರಾದಿತ್ವ ವೊದಲಾದುವು ಇಲ್ಲವೆಂದು ಸಿದ್ಧವಾಗುತ್ತದೆ. ಹಿಂಸಾಯೋಗ್ಯನಾಗಿ ಇರುವನೆಂದು ನಿರ್ದೇಶ ಮಾಡಿರುವ ಪ್ರಾಣವು ಆ ಕಾರಣದಿಂದಲೇ ಪ್ರತ್ಯಗಾತ್ಮನು. ಅರನಾಭಿದೃಷ್ಟಾನ್ತವನ್ನು ಇಟ್ಟುಕೊಂಡು ಪ್ರಾಣ ಶಬ್ದದಿಂದ ಹೇಳಲ್ಪಟ್ಟಿರುವವನು ಪರಮಾತ್ಮನೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಪರಮಾತ್ಮನಿಗೆ ಹಿಂಸೆಯ ಪ್ರಸಂಗವೇ ಇರುವುದಿಲ್ಲ. ಜೀವಾತ್ಮನಿಗಿಂತ ಬೇರೆಯಾದ ಭೋಗ್ಯ ಹಾಗೂ ಭೋಗೋಪಕರಣಗಳು ಎಂಬ ಎಲ್ಲಾ ಅಚಿದ್ವಸ್ತುವೂ ಜೀವಾತ್ಮನಿಗೆ ಆಧೀನವಾದ ಸ್ಥಿತಿಯನ್ನು ಹೊಂದಿರುವ ಕಾರಣ ಅರನಾಭಿ ದೃಷ್ಟಾನ್ತವು ಜೀವಾತ್ಮನನ್ನೇ ಬೋಧಿಸುತ್ತದೆ. ''ನಾಯಂ ಹನ್ತಿ ನ ಹನ್ಯತೇ'' ಎಂದು ಜೀವನಿಗೆ ಸ್ವತಃ ಹಿಂಸೆಯ ಸಂಭವವಿಲ್ಲವೆಂದು ಹೇಳಿದ್ದರೂ ದೇಹವೇ ವೊದಲಾದುವುಗಳ ಜೊತೆಗೆ ಕೂಡಿರುವುದರ ಕಾರಣ ಹಿಂಸ್ಯತ್ವವು ಸಂಭವಿಸುತ್ತದೆ. ಆದುದರಿಂದ ಪ್ರಾಣ ಶಬ್ದಕ್ಕೆ ಇಲ್ಲಿ ಜೀವಾತ್ಮನೆಂಬ ಅರ್ಥವನ್ನು ಹಿಡಿಯಬೇಕು.

''ಭೂಮಾ ಸಂಪ್ರಸಾದಾತ್ ಅಧ್ಯುಪದೇಶಾತ್'' (ವೇದಾನ್ತ ಸೂತ್ರ ೧.೩.೭.) ಎಂಬ ಸೂತ್ರದಲ್ಲಿಯೂ ಸಂಪ್ರಸಾದ ಶಬ್ದವು ಪ್ರತ್ಯಗಾತ್ಮನನ್ನು ಬೋಧಿಸುವುದೆಂದು ವಿವರಿಸಿರುವ ಕಾರಣ ಸಂಪ್ರಸಾದ, ಪ್ರಾಣ ಎಂಬ ಶಬ್ದಗಳಿಂದ ಜೀವಾತ್ಮನನ್ನೇ ನಿರ್ದೇಶಿಸಿದೆಯೆಂದು ಸಿದ್ಧವಾಗುತ್ತದೆ.

ಅತಿವಾದಿ--ಎಂದರೆ ತಾನು ಉಪಾಸನೆ ಮಾಡುವ ವಸ್ತುವಿನ ಸರ್ವೋತ್ಕೃಷ್ಟತೆಯನ್ನು ಹೇಳುವವನು ಎಂದರ್ಥ.

ಪ್ರಾಣ ಶಬ್ದದಿಂದ ಹೇಳಲ್ಪಟ್ಟ ಜೀವಾತ್ಮನು, ಇದಕ್ಕೆ ಮೊದಲು ಹೇಳಿದ ನಾಮದಿಂದ ಮೊದಲಾಗಿ ಆಶೆಯೊಡನೆ ಕೊನೆಯಾಗುವ ಉಳಿದ ವಸ್ತುಗಳೆಲ್ಲಕ್ಕಿಂತ ಸರ್ವಾತಿಶಾಯಿ ಆಗಿರುವುದರಿಂದ ಅತಿವಾದಿತ್ವವನ್ನು ಅಲ್ಲಗಳೆಯಬಾರದು ಎಂಬ ಭಾವ.

ಇಲ್ಲಿಗೆ ಹದಿನೈದನೆಯ ಖಂಡ ಮುಗಿದುದು

* * *

ಹದಿನಾರನೆಯ ಖಂಡ
ಸತ್ಯಾತಿ ವಾದಿತ್ವ

ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ ಸೋಽಹಂ ಭಗವಃ ಸತ್ಯೇನಾತಿವದಾನೀತಿ ಸತ್ಯಂ ತ್ವೇವ ವಿಜಿಜ್ಞಾಸಿತವ್ಯಮಿತಿ ಸತ್ಯಂ ಭಗವೋ ವಿಜಿಜ್ಞಾಸ ಇತಿ ॥ ೧ ॥

ಆದರೆ ಯಾವನು ಸತ್ಯದಿಂದ ಅತಿವಾದ ಮಾಡುತ್ತಾನೆಯೋ ಅವನೇ ನಿಜವಾಗಿ ಅತಿವಾದ ಮಾಡುತ್ತಾನೆ.

''ಭಗವನ್ತನೇ ನಾನು ಸತ್ಯದಿಂದ ಅತಿ ವದನ ಮಾಡಲಿಚ್ಛಿಸುವೆನು.''

''ಆದರೆ ಸತ್ಯವನ್ನೇ ವಿಜಿಜ್ಞಾಸೆ ಮಾಡತಕ್ಕದ್ದು''

''ಭಗವಾನರೇ! ನಾನು ಸತ್ಯವನ್ನು ವಿಜಿಜ್ಞಾಸೆ ಮಾಡಬಯಸುತ್ತೇನೆ.''

ವಿ : 'ಏಷ ತು' ಎಂಬಲ್ಲಿ 'ತು' ಶಬ್ದವು ಒಂದು ವೈಲಕ್ಷಣವನ್ನು ತೋರಿಸುತ್ತದೆ. ಹಿಂದು ಹಿಂದಿನ ಪರ್ಯಾಯಗಳಲ್ಲಿ ಅತಿವಾದಿತ್ವವನ್ನು ಹೇಳದೇ ಇದ್ದುದರಿಂದ ಆತ್ಮೋಪದೇಶವು ಪ್ರಾಣ ಶಬ್ದದಿಂದ ಹೇಳಲ್ಪಟ್ಟ ಪರಮಾತ್ಮನಲ್ಲಿ ಪರ್ಯವಸಾನಗೊಂಡಿತು ಎಂದು ಭಾವಿಸಿ. ''ಪ್ರಾಣಕ್ಕಿಂತಲೂ ಹೆಚ್ಚಿನದು ಇದೆಯೇ?'' ಎಂದು ಪ್ರಶ್ನೆಯನ್ನು ನಾರದರು ಮಾಡಲಿಲ್ಲ, ಪರಮಹಿತವಾದ ಉಪದೇಶವನ್ನು ತಪ್ಪಿಸಬಾರದೆಂಬ ಭಾವದಿಂದ ಸನತ್ಕುಮಾರರು ಸ್ವಯಮೇವ ಆ ಪ್ರತ್ಯಗಾತ್ಮನಿಗಿಂತಲೂ ಅತಿಶಯವನ್ನುಳ್ಳ ಪರಮಾತ್ಮನನ್ನು ''ಏಷ ತು ವಾ ಅತಿವದತಿ ಯಃ ಸತ್ಯೇನ ಅತಿವದತಿ'' ಎಂದು ಮೊದಲು ಮಾಡಿ ಉಪದೇಶಿಸುತ್ತಾರೆ. ''ಸತ್ಯೇನ'' ಎಂದರೆ ಪರಬ್ರಹ್ಮದಿಂದ ಎಂದರ್ಥ. 'ಸತ್ಯ' ಶಬ್ದದಿಂದ ಪರಬ್ರಹ್ಮವು ಹೇಳಲ್ಪಟ್ಟಿದೆ.

ಪರಬ್ರಹ್ಮದ ನಿಮಿತ್ತ ಅತಿವಾದಿಯಾಗಲು ಬಯಸಿದರೆ ಆಗ ನೀನು ಬ್ರಹ್ಮವನ್ನು ಉಪಾಸನೆ ಮಾಡಬೇಕು ಎಂಬ ಅರ್ಥ. ಈ ಪರಬ್ರಹ್ಮೋಪಾಸನೆಯೇ ಅಂತಹ ಅತಿವಾದಿತ್ವಕ್ಕೆ ಕಾರಣವಾಗುತ್ತದೆ.

ಹದಿನಾರನೆಯ ಖಂಡ ಮುಗಿದುದು

* * *

ಹದಿನೇಳನೆಯ ಖಂಡ

ಯದಾ ವೈ ವಿಜಾನಾತ್ಯಥ ಸತ್ಯಂ ವದತಿ ನಾವಿಜಾನನ್ ಸತ್ಯಂ ವದತಿ ವಿಜಾನನ್ನೇವ ಸತ್ಯಂ ವದತಿ ವಿಜ್ಞಾನಂ ತ್ವೇವ ವಿಜಿಜ್ಞಾಸಿತವ್ಯಮಿತಿ ವಿಜ್ಞಾನಂ ಭಗವೋ ವಿಜಿಜ್ಞಾಸ ಇತಿ ॥ ೧ ॥

ಸ : ಯಾವಾಗ ಸಾಕ್ಷಾತ್ಕರಿಸಿಕೊಳ್ಳುವನೋ ಆಗ ಸತ್ಯಾತಿವಾದಿಯಾಗುತ್ತಾನೆ. ಸಾಕ್ಷಾತ್ಕಾರವನ್ನು ಹೊಂದದೆ ಸತ್ಯಾತಿವಾದಿಯಾಗುವುದಿಲ್ಲ. ಸಾಕ್ಷಾತ್ಕರಿಸಿಕೊಂಡೇ ಸತ್ಯಾತಿವಾದಿಯಾಗುತ್ತಾನೆ. ಸಾಕ್ಷಾತ್ಕಾರ ರೂಪವಾದ ವಿಜ್ಞಾನವನ್ನೇ ಪಡೆದುಕೊಳ್ಳಬೇಕು.

ನಾ : " ಭಗವಾನರೇ, ಅತಿವಾದಿತ್ವಕ್ಕೆ ಕಾರಣವಾಗುವ ಸಾಕ್ಷಾತ್ಕಾರವನ್ನು ಪಡೆಯಲಿಚ್ಛಿಸುತ್ತೇನೆ."

ವಿ : 'ವಿಜಾನಾತಿ' ಎಂಬ ಶಬ್ದ ಸಾಕ್ಷಾತ್ಕಾರವನ್ನು ಬೋಧಿಸುತ್ತದೆ. ಇದು ಶಾಸ್ತ್ರಜ್ಞಾನದಿಂದ ಉಂಟಾಗುವ ಅರಿವಲ್ಲ. 'ವಿಜಿಜ್ಞಾಸಿತವ್ಯಂ' ಎಂದರೆ 'ಸಂಪಾದ್ಯಮ್' ಎಂದರ್ಥ. ಬ್ರಹ್ಮಸಾಕ್ಷಾತ್ಕಾರದ ನಿಮಿತ್ತ ಪ್ರಾಪ್ತವಾಗುವ ಅತಿವಾದಿತ್ವದ ಸಿದ್ಧಿಗಾಗಿ ಪರಬ್ರಹ್ಮಸಾಕ್ಷಾತ್ಕಾರಕ್ಕೆ ಉಪಾಯವಾದ ಬ್ರಹ್ಮೋಪಾಸನವನ್ನು "ಸತ್ಯನ್ತ್ವೇವ ವಿಜಿಜ್ಞಾಸಿತವ್ಯಮ್" ಎಂದು ಉಪದೇಶಿಸಲಾಗಿದೆ.

ಹದಿನೇಳನೆಯ ಖಂಡ ಮುಗಿದುದು

* * *

ಹದಿನೆಂಟನೆಯ ಖಂಡ
'ಮನನ' ದಿಂದ ಬ್ರಹ್ಮೋಪಾಸನ

ಯದಾ ವೈ ಮನುತೇಽಥ ವಿಜಾನಾತಿ ನಾಮತ್ವಾ ವಿಜಾನಾತಿ ಮತ್ವೈವ ವಿಜಾನಾತಿ ಮತಿಸ್ತ್ವೇವ ವಿಜಿಜ್ಞಾಸಿತವ್ಯೇತಿ | ಮತಿಂ ಭಗವೋ ವಿಜಿಜ್ಞಾಸ ಇತಿ ॥ ೧ ॥

ಯಾವಾಗ ಮನನ ಮಾಡುತ್ತಾನೆಯೋ ಆಗ ಬ್ರಹ್ಮೋಪಾಸನೆಯನ್ನು ಮಾಡುತ್ತಾನೆ. ಮನನ ಮಾಡದೆ ಬ್ರಹ್ಮೋಪಾಸನೆ ಆಗುವುದಿಲ್ಲ. ಮನನ ಮಾಡಿಯೇ ಬ್ರಹ್ಮೋಪಾಸನೆ ಮಾಡುತ್ತಾನೆ. ಆದುದರಿಂದ (ಬ್ರಹ್ಮೋಪಾಸನೆಗೆ ಉಪಾಯವಾದ) ಮನನವನ್ನು ಸಂಪಾದಿಸಿಕೊಳ್ಳಬೇಕು.

'ಭಗವಾನರೇ, ಮನನವನ್ನು ಸಂಪಾದಿಸಿ ಕೊಳ್ಳಲಿಚ್ಛಿಸುತ್ತೇನೆ.'

ಹದಿನೆಂಟನೆಯ ಖಂಡ ಮುಗಿದುದು

* * *

ಹತ್ತೊಂಬತ್ತನೆಯ ಖಂಡ
'ಶ್ರದ್ಧೆ'ಯಿಂದ ಮನನ

ಯದಾ ವೈ ಶ್ರದ್ಧಧಾತ್ಯಥ ಮನುತೇ ನಾಶ್ರದ್ಧದನ್ಮನುತೇ ಶ್ರದ್ಧದೇವ ಮನುತೇ ಶ್ರದ್ಧಾ ತ್ವೇವ ವಿಜಿಜ್ಞಾಸಿತವ್ಯೇತಿ ಶ್ರದ್ಧಾಂ ಭಗವೋ ವಿಜಿಜ್ಞಾಸ ಇತಿ ॥ ೧ ॥

ಸ : ಯಾವಾಗ ಶ್ರದ್ಧೆಯನ್ನು ಮಾಡುತ್ತಾನೋ ಆಗ ಮನನ ಮಾಡುತ್ತಾನೆ. ಶ್ರದ್ಧೆಯನ್ನು ಮಾಡದವನು ಮನನ ಮಾಡುವುದಿಲ್ಲ. ಶ್ರದ್ಧೆಯನ್ನು ಮಾಡುವವನೇ ಮನನ ಮಾಡುತ್ತಾನೆ. ಶ್ರದ್ಧೆಯನ್ನೇ ಸಂಪಾದಿಸಿಕೊಳ್ಳಬೇಕು.

"ಭಗವಾನರೇ, ಶ್ರದ್ಧೆಯನ್ನೇ ನಾನು ಸಾಧಿಸಿಕೊಳ್ಳಲಿಚ್ಛಿಸುತ್ತೇನೆ ".

ವಿ : ಹಿಂದಿನ ಖಂಡದಲ್ಲಿ ಹೇಳಿರುವ ಮನನವು ಶ್ರವಣ ಮಾಡಿದುದರ ಪ್ರತಿಷ್ಠಾಪನಾರ್ಥವಾದುದರಿಂದ ಶ್ರವಣ ಅರ್ಥತಃ ಸಿದ್ಧವಾಯಿತು. ಶ್ರವಣಕ್ಕೆ ಉಪಾಯವಾದ ಶ್ರದ್ಧೆಯನ್ನು ಇಲ್ಲಿ ಹೇಳಿದೆ. "ಬ್ರಹ್ಮಣಿ ಶ್ರದ್ಧಾ" ಎಂದು ಹೇಳಿರುವ ಭಾವ; ಬ್ರಹ್ಮವನ್ನು ಶ್ರವಣ ಮಾಡುವ ವಿಷಯದಲ್ಲಿ ಶ್ರದ್ಧೆ ಎಂಬ ಭಾವ. ಶ್ರದ್ಧಾ ಎಂಬುವುದಕ್ಕೆ ವ್ಯಾಸಾರ್ಯರು 'ತ್ವರಾ' ಎಂದು ವ್ಯಾಖ್ಯಾನ ಮಾಡಿದ್ದಾರೆ.

ಹತ್ತೊಂಭತ್ತನೆಯ ಖಂಡ ಮುಗಿದುದು

* * *

ಇಪ್ಪತ್ತನೆಯ ಖಂಡ
ನಿಷ್ಠೆಯಿಂದ ಶ್ರದ್ಧೆ

ಯದಾ ವೈ ನಿಷ್ಠತ್ಯಥ ಶ್ರದ್ಧದಾತಿ ನಾನಿಷ್ಠನ್ ಶ್ರದ್ಧದಾತಿ ನಿಷ್ಠನ್ನೇವ ಶ್ರದ್ಧದಾತಿ ನಿಷ್ಠಾತ್ವೇವ ವಿಜಿಜ್ಞಾಸಿತವ್ಯೇತಿ| ನಿಷ್ಠಾಂ ಭಗವೋ ವಿಜಿಜ್ಞಾಸ ಇತಿ ॥ ೧ ॥

ಸ : ಯಾವಾಗ ದೃಢನಿಶ್ಚಯ ರೂಪವಾದ ನಿಷ್ಠೆಯನ್ನು ಮಾಡುತ್ತಾನೋ ಆಗ ಶ್ರದ್ಧೆಯನ್ನು ಹೊಂದುತ್ತಾನೆ. ನಿಷ್ಠೆ ಇಲ್ಲದವನು ಶ್ರದ್ಧೆ ಮಾಡುವುದಿಲ್ಲ. ನಿಷ್ಠೆಯನ್ನು ಹೊಂದಿದವನೇ ಶ್ರದ್ಧೆ ಮಾಡುತ್ತಾನೆ. ನಿಷ್ಠೆಯನ್ನೇ ಸಂಪಾದಿಸಿಕೊಳ್ಳಬೇಕು.

ನಾ : "ಭಗವಾನರೇ! ನಿಷ್ಠೆಯನ್ನು ನಾನು ಸಾಧಿಸಿಕೊಳ್ಳುತ್ತೇನೆ."

ವಿ : ಬ್ರಹ್ಮವನ್ನೇ ಶ್ರವಣ ಮಾಡತಕ್ಕದ್ದು, ಮತ್ತಾವುದನ್ನೂ ಅಲ್ಲ ಎಂಬ ನಿಶ್ಚಯಾತ್ಮಕವಾದ ನಿಷ್ಠೆಯನ್ನು ಇಲ್ಲಿ 'ನಿಸ್ತಿಷ್ಠತಿ' ಎಂದು ಹೇಳಿದೆ. ಕೇಳುವವನಿಗೆ ತ್ವರೆಯ ರೂಪವಾದ ಶ್ರದ್ಧೆಗೆ ಉಪಾಯವಾದುದು ಈ ರೀತಿಯಾದ ನಿಷ್ಠೆ.

ಇಪ್ಪತ್ತನೆಯ ಖಂಡ ಮುಗಿದುದು

* * *

ಇಪ್ಪತ್ತೊಂದನೆಯ ಖಂಡ
ಕೃತಿಯಿಂದ ನಿಷ್ಠೆ

ಯದಾ ವೈ ಕರೋತ್ಯಥ ನಿಸ್ತಿಷ್ಠತಿ ನಾಕೃತ್ವಾ ನಿಸ್ತಿಷ್ಠತಿ ಕೃತ್ವೈವ ನಿಸ್ತಿಷ್ಠತಿ ಕೃತಿಸ್ತ್ವೇವ ವಿಜಿಜ್ಞಾಸಿತವ್ಯೇತಿ| ಕೃತಿಂ ಭಗವೋ ವಿಜಿಜ್ಞಾಸ ಇತಿ ॥ ೧ ॥

ಸ : ಯಾವಾಗ ಮಾಡುತ್ತಾನೋ ಆಗ ನಿಷ್ಠೆಯುಳ್ಳವನಾಗುತ್ತಾನೆ. ಮಾಡದೆ ನಿಷ್ಠೆಯುಳ್ಳವನಾಗುವುದಿಲ್ಲ. ಮಾಡಿಯೇ ನಿಷ್ಠೆಯುಳ್ಳವನಾಗುತ್ತಾನೆ. ಕೃತಿಯನ್ನು ಸಂಪಾದಿಸಿಕೊಳ್ಳಬೇಕು.

ನಾ : "ಭಗವಾನರೇ! ಕೃತಿಯನ್ನು ನಾನು ಸಂಪಾದಿಸಿಕೊಳ್ಳಲಿಚ್ಛಿಸುತ್ತೇನೆ."

'ಕೃತಿ' ಎಂಬುದು ಉದ್ಯೋಗ, ಪ್ರಯತ್ನ ಎಂಬ ಪದಗಳಿಗೆ ಮತ್ತೊಂದು ಪರ್ಯಾಯ. ತಾನು ಶ್ರವಣ ಮಾಡಬೇಕಾದುದಕ್ಕಿಂತ ಬೇರೆಯದರಲ್ಲಿ ಹೇಯತ್ವವನ್ನು ಅನುಸಂಧಾನ ಮಾಡಿ ಮನಸ್ಸನ್ನು ನಿಯಮನ

ಮಾಡುವುದು 'ಕೃತಿ'. ಇದು 'ಬ್ರಹ್ಮವನ್ನೇ ಕೇಳಬೇಕು' ಎಂಬುವ ನಿಷ್ಠೆಗೆ ಕಾರಣವಾಗುವುದರಿಂದ ಇದನ್ನು ಸಂಪಾದಿಸಿಕೊಳ್ಳಬೇಕು ಎಂದು ಅರ್ಥ.

ಇಪ್ಪತ್ತೊಂದನೆಯ ಖಂಡ ಮುಗಿದುದು

* * *

ಇಪ್ಪತ್ತೆರಡನೆಯ ಖಂಡ
ಸುಖ ಜ್ಞಾನದಿಂದ ಕೃತಿ

ಯದಾ ವೈ ಸುಖಂ ಲಭತೇऽಥ ಕರೋತಿ ನಾಸುಖಂ ಲಬ್ಧ್ವಾ ಕರೋತಿ ಸುಖಮೇವ ಲಬ್ಧ್ವಾ ಕರೋತಿ ಸುಖಂ ತ್ವೇವ ವಿಜಿಜ್ಞಾಸಿತವ್ಯಮಿತಿ | ಸುಖಂ ಭಗವೋ ವಿಜಿಜ್ಞಾಸ ಇತಿ || ೧ ||

ಸ : ಯಾವಾಗ ಸುಖವನ್ನು ಪಡೆಯುತ್ತಾನೋ ಆಗ ಮಾಡುತ್ತಾನೆ. ಸುಖವನ್ನು ಪಡೆಯದೆ ಮಾಡುವುದಿಲ್ಲ. ಸುಖವನ್ನು ಪಡೆದೇ ಮಾಡುತ್ತಾನೆ. ಆದುದರಿಂದ ಸುಖವನ್ನು ತಿಳಿಯಬೇಕು.

ನಾ : "ಭಗವಾನರೇ! ನಾನು ಸುಖವನ್ನು ತಿಳಿಯಲಿಚ್ಛಿಸುತ್ತೇನೆ "

ವಿ : ಶ್ರವಣ ಮಾಡಬೇಕಾದ ಬ್ರಹ್ಮಕ್ಕಿಂತ ಬೇರೆಯಾದುವು ಹೇಯವಾದುವು ಎಂಬ ಅನುಸಂಧಾನದಿಂದ ಮನಸ್ಸನ್ನು ನಿಯಮನ ಗೊಳಿಸುವ ರೂಪವಾದ ಕೃತಿಗೆ ಹೇತುವಾದುದು ಪರಬ್ರಹ್ಮವು ಅತ್ಯಂತ ಅನುಕೂಲವಾದುದು, ಸುಖಸ್ವರೂಪವಾದುದು ಎಂಬ ಅರಿವು. ಬ್ರಹ್ಮವು ಅತ್ಯಂತಾನುಕೂಲ ಮತ್ತು ಸುಖ ಎಂದು ತಿಳಿಯದೆ ಹೋದರೆ ಇತರ ವಿಷಯಗಳು ಹೇಯವೆಂಬುದು ಗೊತ್ತಾಗುವುದಿಲ್ಲ. ಹಾಗೆ ಗೊತ್ತಾಗದಿದ್ದರೆ ಇತರ ವಿಷಯಗಳಿಂದ ಮನಸ್ಸನ್ನು ಹಿಂತಿರುಗಿಸಲಾಗುವುದಿಲ್ಲ. ಆದುದರಿಂದ ಬ್ರಹ್ಮವು ಸುಖವೆಂದು ಅರಿಯಬೇಕು ಎಂಬ ಭಾವ.

ಆದುದರಿಂದ ಶ್ರೋತವ್ಯವಾದ ಬ್ರಹ್ಮದಲ್ಲಿ ಅತ್ಯಂತ ಅನುಕೂಲತ್ವದ ಅರಿವು ಮಾಡಬೇಕು. ಅದನ್ನೇ ಇಲ್ಲಿ 'ಸುಖಂ ಲಭತೇ' ಎಂದು ಹೇಳಿದೆ! 'ಲಭತೇ' ಎಂಬ ಕ್ರಿಯಾಪದದ ಅರ್ಥವು ಜ್ಞಾನವನ್ನು

ಪಡೆಯುತ್ತಾನೆಂದು. ಇಲ್ಲಿ 'ವಿಜಿಜ್ಞಾಸಿತವ್ಯಂ' ಎಂಬುದಕ್ಕೆ ತಿಳಿಯಲ್ಪಡಬೇಕು ಎಂದು ಅರ್ಥ. 'ಉಪಾಸಿತವ್ಯತ್ವ'ವಾಗಲಿ 'ಸಂಪಾದನೀಯತ್ವ'ವಾಗಲಿ ಅಲ್ಲ.

ಇಪ್ಪತ್ತೆರಡನೆಯ ಖಂಡ ಮುಗಿದುದು

* * *

ಇಪ್ಪತ್ತಮೂರನೆಯ ಖಂಡ
ಭೂಮವೇ ಸುಖ

ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ ಭೂಮೈವ ಸುಖಂ ಭೂಮಾತ್ವೇವ ವಿಜಿಜ್ಞಾಸಿತವ್ಯ ಇತಿ| ಭೂಮಾನಂ ಭಗವೋ ವಿಜಿಜ್ಞಾಸ ಇತಿ
|| ೧ ||

ಸ : ಯಾವುದು ಭೂಮವೋ ಅದೇ ಸುಖ. ಅಲ್ಪದಲ್ಲಿ ಸುಖವಿಲ್ಲ. ಭೂಮವೇ ಸುಖ. ಭೂಮವನ್ನೇ ಉಪಾಸನೆ ಮಾಡಬೇಕು.

ನಾ : ಭಗವಾನರೇ! ನಾನು ಭೂಮವನ್ನು ಉಪಾಸಿಸಲಿಚ್ಛಿಸುತ್ತೇನೆ.

ವಿ : 'ಭೂಮಾ' ಶಬ್ದ ಬಹುತ್ವವನ್ನು ಹೇಳುತ್ತದೆ. 'ಅಲ್ಪ' ಶಬ್ದಕ್ಕೆ ಪ್ರತಿಯಾಗಿ 'ಭೂಮಾ' ಶಬ್ದವನ್ನು ಹೇಳಿರುವುದರಿಂದ ಗುಣೋತ್ಕರ್ಷ ದಿಂದುಂಟಾದ ವಿಪುಲತ್ವವನ್ನು ಇದು ತಿಳಿಸುತ್ತದೆ. ಇದು ಸಂಖ್ಯಾವಿಶೇಷವನ್ನು ಹೇಳುವುದಿಲ್ಲ.

ಅಲ್ಪನಾದ ಪ್ರತ್ಯಗಾತ್ಮನಲ್ಲಿ ಪ್ರಶಸ್ತವಾದ ಸುಖತ್ವ ಇಲ್ಲವೆಂದು 'ನಾಲ್ಪೇ ಸುಖಮಸ್ತಿ' ಎಂದು ಹೇಳಿದೆ. 'ಸುಖ' ಎಂಬ ಶಬ್ದ ಅತ್ಯಂತ ಅನುಕೂಲತ್ವವನ್ನು ಹೊಂದಿರುವುದನ್ನು ಹೇಳುತ್ತದೆ. ಎಂದರೆ ಭೂಮಕ್ಕಿಂತ ಬೇರೆಯಾದುದರಲ್ಲಿ ಸುಖತ್ವವು ಇಲ್ಲ. ಸುಖತ್ವವನ್ನು ಹೊಂದಿರುವ ಕಾರಣವೇ ಬ್ರಹ್ಮಕ್ಕೆ ಭೂಮತ್ವ ಇದೆ ಎಂಬ ಭಾವ.

ಇಪ್ಪತ್ತಮೂರನೆಯ ಖಂಡ ಮುಗಿದುದು

* * *

ಇಪ್ಪತ್ತನಾಲ್ಕನೆಯ ಖಂಡ
ಭೂಮವೇ ಅಮೃತ

ಯತ್ರ ನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸ ಭೂಮಾऽಥ ಯತ್ರಾನ್ಯತ್ಪಶ್ಯತ್ಯನ್ಯಚ್ಛೃಣೋತ್ಯನ್ಯದ್ವಿಜಾನಾತಿ ತದಲ್ಪಂ ಯೋ ವೈ ಭೂಮಾ ತದಮೃತಮಥ ಯದಲ್ಪಂ ತನ್ಮರ್ತ್ಯಗ್ಂ ಸ ಭಗವಃ
. ಕಸ್ಮಿನ್ನು ತಿಷ್ಠಿತ ಇತಿ | ಸ್ವೇ ಮಹಿಮ್ನಿ ಯದಿ ವಾ ನ ಮಹಿಮ್ನೀತಿ ॥ ೧ ॥

ಸ : ಎಲ್ಲಿ ಬೇರೊಂದನ್ನು ಕಾಣುವುದಿಲ್ಲವೋ, ಬೇರೊಂದನ್ನು ಕೇಳುವುದಿಲ್ಲವೋ, ಬೇರೊಂದನ್ನು ತಿಳಿಯುವುದಿಲ್ಲವೋ ಅದು ಭೂಮಾ. ಮತ್ತೆ ಎಲ್ಲಿ ಮತ್ತೊಂದನ್ನು ಕಾಣುವನೋ, ಎಲ್ಲಿ ಮತ್ತೊಂದನ್ನು ಕೇಳುವನೋ, ಮತ್ತೊಂದನ್ನು ಅರಿಯುವನೋ ಅದು ಅಲ್ಪವು. ಯಾವುದು ಭೂಮವೋ ಅದು ಅಮೃತ ; ಯಾವುದು ಅಲ್ಪವೋ ಅದು ಮರ್ತ್ಯ.

ನಾ : "ಭಗವಾನರೇ! ಆ ಭೂಮವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ?"

ಸ : ''ತನ್ನ ಮಹಿಮೆಯಲ್ಲಿಯೇ ಪ್ರತಿಷ್ಠಿತವಾಗಿದೆ ಅಥವಾ ಮಹಿಮೆಯಲ್ಲಿ ಪ್ರತಿಷ್ಠಿತವಾಗಿಲ್ಲ.

ಏ : 'ಯತ್ರ' ಎಂದರೆ ಯಾವುದನ್ನು ಅನುಭವಿಸುತ್ತಿರುವಾಗ ಎಂದು ಅರ್ಥ. ಭೂಮವನ್ನು(ಬ್ರಹ್ಮವನ್ನು) ಅನುಭವಿಸುವಾಗ ಅದಕ್ಕಿಂತ ಬೇರೆಯಾದ ಮತ್ತೊಂದೂ ಕಂಡು ಬರುವುದಿಲ್ಲ. ಭೂಮವನ್ನು ಶ್ರವಣ ಮಾಡುವಾಗ ಅದಕ್ಕಿಂತ ಬೇರೆಯಾದ ಮತ್ತೊಂದೂ ಕೇಳಿ ಬರುವುದಿಲ್ಲ. ಅದನ್ನು ತಿಳಿಯುವಾಗ ಅದಕ್ಕಿಂತ ಬೇರೆಯಾದ ಮತ್ತೊಂದೂ ತಿಳಿದುಬರುವುದಿಲ್ಲ. ಅದಕ್ಕಿಂತ ಬೇರೆಯಾದುದು ಕಂಡು ಬರದೇ ಇರುವುದು ಏತಕ್ಕೆಂದರೆ ಅದಕ್ಕಿಂತ ಬೇರೆಯಾದ ಮತ್ತೊಂದು ಇಲ್ಲದಿರುವುದೇ ಆಗಿದೆ. ಚೇತನಾಚೇತನ ವಸ್ತುಗಳು ಭೂಮಕ್ಕಿಂತ ಭಿನ್ನವಾಗಿ ಇರುವಾಗ ಭೂಮಕ್ಕಿಂತ ಬೇರೆಯಾದುದು ಇಲ್ಲವೆಂದು ಹೇಗೆ ಹೇಳಬಹುದು? ಇದಕ್ಕೆ ಹೀಗೆ

ಸಮಾಧಾನವನ್ನು ಹೇಳಲಾಗುತ್ತದೆ. ಬ್ರಹ್ಮ ಶಬ್ದವು ಹೇಗೋ ಹಾಗೆ ಭೂಮ ಶಬ್ದಕ್ಕೂ ವಸ್ತು ಪರಿಚ್ಛೇದ ಶೂನ್ಯತ್ವ ಇದೆ. ಪರಿಚ್ಛೇದವೆಂದರೆ ಇದು ಇದಲ್ಲ ಎಂದು ನಿರ್ದೇಶ ಮಾಡುವುದಕ್ಕಾಗತಕ್ಕದ್ದು. ಇಂತಹ ವಸ್ತು ಪರಿಚ್ಛೇದವನ್ನು ಭೂಮಾ ಶಬ್ದಕ್ಕೆ ಹೇಳುವುದಕ್ಕಾಗುವುದಿಲ್ಲ. ಪರಿಚ್ಛೇದವಿಲ್ಲ ಎಂದರೆ ಅದಕ್ಕಿಂತ ಪೃಥಕ್ಕಾಗಿ ಸಿದ್ಧವಾದ ಮತ್ತೊಂದು ವಸ್ತು ಇಲ್ಲದೇ ಇರುವುದೇ ಆಗಿದೆ. ಬ್ರಹ್ಮದ ಇರುವಿಕೆಗೆ ಅಧೀನವೇ ಆಗಿರುವ ಸತ್ತೆಯನ್ನು ಹೊಂದಿರುವ ಚೇತನಾಚೇತನಗಳು ಇಲ್ಲಿ ಸೂಚಿತವಾಗುವುದರಿಂದ 'ಯತ್ರ ನಾನ್ಯತ್ ಪಶ್ಯತಿ' ಎಂಬಲ್ಲಿ ಯಾವುದನ್ನು ಅನುಭವಿಸುವಾಗ ಆ ಭೂಮದ ಸತ್ತೆಗೆ ಅಧೀನವಲ್ಲದ ಸತ್ತೆಯು ಇರುವುದಿಲ್ಲವೋ ಎಂಬ ಅರ್ಥ ಸರಸವಾಗಿ ಬರುತ್ತದೆ. ಎಂದರೆ ಈ ಭೂಮವನ್ನು ಆತ್ಮವನ್ನಾಗಿ ಹೊಂದದಿರುವ ವಸ್ತು ಇಲ್ಲ ಎಂಬ ಅರ್ಥ. "ಅನ್ಯತ್ ಪಶ್ಯತಿ" ಎಂಬಲ್ಲಿ ಮೇಲೆ ಹೇಳಿದ ಲಕ್ಷಣಗಳನ್ನುಳ್ಳ ಭೂಮಕ್ಕಿಂತ ವಿಪರೀತವಾದ ಲಕ್ಷಣವನ್ನುಳ್ಳದು 'ಅಲ್ಪ' ಎಂದು ಅರ್ಥ. ಭೂಮವು ಅಮೃತ, ಎಂದರೆ ಮೇಲೆ ಹೇಳಿದ ಲಕ್ಷಣವನ್ನುಳ್ಳ ಭೂಮವೇ ಅಮೃತ. ಜನನ ಮರಣಾದಿಗಳಿಲ್ಲದುದೂ ನಿತ್ಯವೂ ಆವಿರ್ಭಾವ ಹೊಂದಿರುವುದೂ ಮತ್ತೊಬ್ಬನಿಗೆ ಅಧೀನವಾಗದುದೂ ಆದ ಅಪಹತಪಾಪ್ಮತ್ವಾದಿ ಗುಣಾಷ್ಟಕವನ್ನು ಉಳ್ಳದ್ದೂ ಎಂಬ ಭಾವ. ನಿತ್ಯ ಮುಕ್ತರಿಗೂ ಸಹ ಅನನ್ಯಾಧೀನವಾದ ಅಂತಹ ಸ್ವರೂಪವಿಲ್ಲ. ಅವರೂ ಬ್ರಹ್ಮಕ್ಕೆ ಅಧೀನವಾದವರೇ.

'ಸ್ವೇಮಹಿಮ್ನಿ' ಎಂದರೆ ತನ್ನ ಮಹಿಮೆಗೆ ತಾನು ಧಾರಕನಾಗಿರುವುದು; 'ಯದಿವಾ ನ ಮಹಿಮ್ನಿ': ಲೋಕದಲ್ಲಿ ತಮಗೆ ಸೇರಿ ತಮ್ಮಿಂದ ನಿಯಾಮ್ಯವಾಗಿರುವ ಪಶು, ಹಸ್ತಿ, ಹಿರಣ್ಯ, ದಾಸ, ಭಾರ್ಯೆ ಮೊದಲಾದುವುಗಳ ಮಹಿಮೆಯಲ್ಲಿ ಪ್ರತಿಷ್ಠಿತನಾಗಿದ್ದಾನೆ ಎಂಬ ಅರ್ಥವನ್ನು ಶಿಷ್ಯನು ಗ್ರಹಿಸಿಯಾನು. ಅಥವಾ ಸ್ವಶಬ್ದವು ಸ್ವಾತ್ಮಪರವಾಗಿರುವುದರಿಂದ 'ಆತ್ಮಾಧಾರ ' ಎಂಬ ಅರ್ಥವನ್ನು ಶಿಷ್ಯನು ಗ್ರಹಿಸಬಹುದು. ಇವೆರಡೂ ಇಲ್ಲಿ ಸಂಭವಿಸಲಾರದ ಕಾರಣ ಇವೆರಡು ಪಕ್ಷಗಳನ್ನೂ 'ಯದಿ ವಾ ನ ಮಹಿಮ್ನಿ' ಎಂಬುವುದರಿಂದ ತಳ್ಳಿಹಾಕಲಾಗಿದೆ.

ಸ : ಗೋ ಅಶ್ವಮಿಹ ಮಹಿಮೇತ್ಯಾಚಕ್ಷತೇ| ಹಸ್ತಿ ಹಿರಣ್ಯಂ ದಾಸ ಭಾರ್ಯಂ ಕ್ಷೇತ್ರಾಣ್ಯಾಯತನಾನೀತಿ ನಾಹಮೇವಂ ಬ್ರವೀಮಿ ಬ್ರವೀಮೀತಿ ಹೋವಾಚಾನ್ಯೋ ಹ್ಯನ್ಯಸ್ಮಿನ್ಪ್ರತಿಷ್ಠಿತ ಇತಿ || ೨ ||

ಸ : ಹಸು, ಅಶ್ವ, ಇವನ್ನು ಮಹಿಮೆ ಎಂದು ಹೇಳುವರು. ಆನೆ, ಹಿರಣ್ಯ, ದಾಸರು, ಭಾರ್ಯೆ, ಹೊಲ, ಮನೆ ಇವುಗಳನ್ನು ಮಹಿಮೆ ಎನ್ನುತ್ತಾರೆ. ಆದರೆ ನಾನು ಹೀಗೆ ಹೇಳುವುದಿಲ್ಲ, ಎಂದು ಅವನು ಹೇಳಿದನು. ಒಬ್ಬನು ಇನ್ನೊಬ್ಬನಲ್ಲಿ ಪ್ರತಿಷ್ಠಿತನಾಗಿದ್ದಾನೆ ಅಲ್ಲವೇ!

ಏ : "ನಾಹ ಮೇವ ಂ ಬ್ರವೀಮಿ"

ಹಸು, ಅಶ್ವ ಮೊದಲಾದವುಗಳಲ್ಲಿ ಪ್ರತಿಷ್ಠಿತತ್ವವನ್ನು ನಾನು ಹೇಳುವುದಿಲ್ಲ. "ಅಸ್ಯ ಮಹಿಮಾನಂ ಇತಿ ವೀತಶೋಕಃ" ಮೊದಲಾದವುಗಳು ಪರಮಾತ್ಮನ ಮಹಿಮೆಯನ್ನು ತಿಳಿಸುತ್ತವೆ. "ಯದಿವಾ ನ ಮಹಿಮ್ನಿ" ಎಂಬುವುದರಿಂದ ಮಹಿಮೆಯನ್ನು ನಿಷೇಧ ಮಾಡಿಲ್ಲ. ಆದರೆ ತನ್ನ ಆ ವಿಭೂತಿರೂಪವಾದ ಮಹಿಮೆಯಲ್ಲಿ ಪ್ರತಿಷ್ಠಿತತ್ವವನ್ನು ನಿಷೇಧಿಸಿದೆ. ತನ್ನ ಸ್ವರೂಪ ಮಹಿಮೆಯಲ್ಲಿ ಪ್ರತಿಷ್ಠಿತತ್ವವನ್ನು ನಿಷೇಧಿಸಿದೆ. ತನಗೆ ತಾನೇ ಪ್ರತಿಷ್ಠೆಯಾಗುವುದು ಸಂಭವಿಸುವುದಿಲ್ಲ.

ಇಪ್ಪತ್ತನಾಲ್ಕನೆಯ ಖಂಡ ಮುಗಿದುದು

* * *

ಇಪ್ಪತ್ತೈದ ನೆಯ ಖಂಡ
ಭೂಮವೇ ಇದೆಲ್ಲವೂ !

ಸ ಏವಾಧಸ್ತಾತ್ಸ ಉಪರಿಷ್ಟಾತ್ಸ ಪಶ್ಚಾತ್ಸ ಪುರಸ್ತಾತ್ಸ ದಕ್ಷಿಣತಃ ಸ ಉತ್ತರತಃ ಸ ಏವೇದಂ ಸರ್ವಮಿತ್ಯಥಾತೋಽಹಙ್ಕಾರಾದೇಶ ಏವಾಹ ಮೇವಾಧಸ್ತಾದಹಮುಪರಿಷ್ಟಾದಹಂ ಪಶ್ಚಾದಹಂ ಪುರಸ್ತಾದಹಂ ದಕ್ಷಿಣತೋಽಹಮುತ್ತರತೋಽಹಮೇವೇದಂ ಸರ್ವಮಿತಿ || ೧ ||

ಆ ಭೂಮವೇ ಕೆಳಗೆ, ಅದೇ ಮೇಲೆ, ಅದೇ ಹಿಂದೆ, ಅದೇ ಮುಂದೆ, ಅದೇ ಬಲಗಡೆಗೆ, ಅದೇ ಎಡಕ್ಕೆ, ಅದೇ ಇದೆಲ್ಲವೂ. ಇನ್ನು ಅಹಂಕಾರಾದೇಶವೇ. ನಾನೇ ಕೆಳಗೆ, ನಾನೇ ಮೇಲೆ, ನಾನೇ ಹಿಂದೆ, ನಾನೇ ಮುಂದೆ, ನಾನೇ ಬಲಕ್ಕೆ, ನಾನೇ ಎಡಕ್ಕೆ, ನಾನೇ ಇದೆಲ್ಲವೂ ಎಂದು.

ಏ : "ಯತ್ರ ನಾನ್ಯತ್ಪಶ್ಯತಿ ಎಂದು ಹೇಳಿದುದು ಯುಕ್ತವಲ್ಲ. ನಾನಾ ದಿಕ್ಕುಗಳಲ್ಲಿ ಬಗೆ ಬಗೆಯಾದ ಮತ್ತು ಬೇರೆ ಬೇರೆಯಾದ ಚೇತನಾಚೇತನ ಪದಾರ್ಥಗಳು ಕಂಡು ಬರುತ್ತಿವೆ." ಎಂದು ಹೇಳಿದರೆ ಅದಕ್ಕೆ ಸಮಾಧಾನ ಈ ಮಂತ್ರದಲ್ಲಿದೆ. ಇಲ್ಲಿ ಭೂಮವನ್ನು, "-ಅದೇ ಇದೆಲ್ಲವೂ" ಎಂದು ಸಾಮಾನಾಧಿಕರಣ್ಯದ ಮೂಲಕ ನಿರ್ದೇಶ ಮಾಡಿದೆ. ಇದೆಲ್ಲವೂ ಎಂದು ಹೇಳಿರುವ ಚೇತನಾಚೇತನ ಪದಾರ್ಥಗಳಿಗೂ ಬ್ರಹ್ಮಕ್ಕೂ ಶರೀರಾತ್ಮಭಾವವು ಫಲಿಸುತ್ತದೆ. ಆದುದರಿಂದ 'ನಾನ್ಯತ್ಪಶ್ಯತಿ' ಎಂಬಲ್ಲಿ ಬ್ರಹ್ಮಾತ್ಮಕವಲ್ಲದ ಇತರ ಪದಾರ್ಥಗಳನ್ನು ನಿಷೇಧಿಸಿದೆ.

ಸರ್ವಾತ್ಮಭೂತವಾದ ಭೂಮವನ್ನು ಉಪಾಸನೆ ಮಾಡುವಾಗ ತನ್ನನ್ನು ಭೂಮದ ಶರೀರವನ್ನಾಗಿ ಭಾವಿಸಿ ಉಪಾಸನೆ ಮಾಡಬೇಕೆಂದು, "ಅಹಂಕಾರಾದೇಶಃ" ಎಂಬಲ್ಲಿ ತಿಳಿಸಿದೆ. ಅಹಂಕಾರ ಎಂದರೆ ಅಹಂಬುದ್ಧಿ. ಅಹಂ ಎನ್ನುವ ಗ್ರಹಿಕೆಯ ಮೂಲಕ ಭೂಮದ ಉಪಾಸನಾಪ್ರಕಾರವನ್ನು ಉಪದೇಶಿಸಿದೆ. ಇದು ಜೀವಸ್ವರೂಪದ ಉಪದೇಶವೆಂದು ತಿಳಿಯಬಾರದು.

"ಅಹಮೇವ ಅಧಸ್ತಾತ್"- ಮೊದಲಾದವುಗಳ ತಾತ್ಪರ್ಯ ಇದು: ಸರ್ವ ದಿಕ್ಕುಗಳಲ್ಲಿಯೂ ಇರುವ ಸರ್ವಾತ್ಮವಾದ ಭೂಮವನ್ನು " ಅಹಂ ಏವ" ಎಂದು ಉಪಾಸನೆ ಮಾಡಬೇಕೆಂದು ಇದರ ಅರ್ಥ. ಜೀವಾತ್ಮನ ಸರ್ವಾತ್ಮಕತ್ವವನ್ನು ಉಪದೇಶಿಸಿಲ್ಲ. ಭೂಮ ಗುಣವಿಶಿಷ್ಟವಾದ ಬ್ರಹ್ಮದ ಅಹಂಗ್ರಹಣೋಪಾಸನೆಯನ್ನು ಇಲ್ಲಿ ಉಪದೇಶಿಸಿದೆ. ಪರಮಾತ್ಮನು ಪ್ರತ್ಯಗಾತ್ಮನನ್ನು ಶರೀರವನ್ನಾಗಿ ಹೊಂದಿರುವನೆಂಬ ಜ್ಞಾನದ ದೃಢೀಕರಣಕ್ಕಾಗಿ ಅಹಂಗ್ರಹೋಪಾಸನವನ್ನು ಮಾಡ ಬೇಕು. ಇಲ್ಲಿ ಅಹಂ ಎಂದರೆ ನನಗೆ ಆತ್ಮನಾದ ಪರಮಾತ್ಮನೆಂದರ್ಥ.

ಅಥಾತ ಆತ್ಮಾದೇಶ ಏವ ಆತ್ಮೈವಾಧಸ್ತಾದಾತ್ಮೋಪರಿಷ್ಟಾದಾತ್ಮಾ ಪಶ್ಚಾದಾತ್ಮಾ ಪುರಸ್ತಾದಾತ್ಮಾ ದಕ್ಷಿಣತ ಆತ್ಮೋತ್ತರತ ಆತ್ಮೈವೇದಗ್ಂ ಸರ್ವಮಿತಿ ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನಾತ್ಮ ರತಿರಾತ್ಮ ಕ್ರೀಡ ಆತ್ಮಮಿಥುನ ಆತ್ಮಾನನ್ದ: ಸ ಸ್ವರಾಡ್ಭವತಿ ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ| ಅಥ' ಯೇಽನ್ಯಥಾತೋ ವಿದು ರನ್ಯರಾಜಾನಸ್ತೇಕ್ಷಯ್ಯಲೋಕಾ ಭವನ್ತಿ ತೇಷಾಗ್ಂ ಸರ್ವೇಷು ಲೋಕೇಷ್ವ ಕಾಮಚಾರೋ ಭವತಿ ।। ೩ ।।

ಇನ್ನು ಆತ್ಮಾದೇಶವನ್ನು ಹೇಳಲಾಗುತ್ತದೆ. ಆತ್ಮನೇ ಕೆಳಗೆ, ಆತ್ಮನೇ ಮೇಲೆ, ಆತ್ಮನೇ ಹಿಂದೆ, ಆತ್ಮನೇ ಮುಂದೆ, ಆತ್ಮನೇ ಬಲಕ್ಕೆ, ಆತ್ಮನೇ ಎಡಕ್ಕೆ, ಆತ್ಮನೇ ಇದೆಲ್ಲವೂ. ಹೀಗೆಂದು ಕಂಡುಕೊಂಡವನಾಗಿ ಹೀಗೆ ಮನನಮಾಡಿ ಹೀಗೆ ನಿದಿಧ್ಯಾಸನ ಮಾಡಿ ಆತ್ಮರತಿಯೂ ಆತ್ಮಕ್ರೀಡನೂ, ಆತ್ಮಮಿಥುನನೂ, ಆತ್ಮಾನಂದನೂ ಆಗುತ್ತಾನೆ. ಅವನು 'ಸ್ವರಾಟ್' ಆಗುತ್ತಾನೆ. ಅವನಿಗೆ ಎಲ್ಲ ಲೋಕಗಳಲ್ಲಿಯೂ ಕಾಮಚಾರ ಉಂಟಾಗುತ್ತದೆ. ಯಾರು ಇದಕ್ಕಿಂತ ಬೇರೆಯಾಗಿ ತಿಳಿದಿರುವರೋ ಅವರು ಮತ್ತೊಬ್ಬ ರಾಜನನ್ನು ಹೊಂದಿರುವವರಾಗುತ್ತಾರೆ. ಕ್ಷಯ ಹೊಂದುವ ಲೋಕವನ್ನು ಅವರು ಹೊಂದಿರುವವರಾಗುತ್ತಾರೆ. ಅವರಿಗೆ ಯಾವ ಲೋಕಗಳಲ್ಲಿಯೂ ಕಾಮಚಾರ ಇರುವುದಿಲ್ಲ.

ವಿ : "ಅಹಂ ಎಂಬುವ ಬುದ್ಧಿಯೂ ಅಹಂ ಎಂಬುವ ಶಬ್ದವೂ ಜೀವಾತ್ಮನಿಗೆ ಅನ್ವಯಿಸುತ್ತವೆ. ಇವು ಹೇಗೆ ಪರಮಾತ್ಮನವರೆಗೂ ಅನ್ವಯಿಸಬಹುದು? ಪರಮಾತ್ಮನನ್ನು ಅಹಂಗ್ರಹದಿಂದ ಉಪಾಸನೆ ಮಾಡುವುದು ಅಯಥಾರ್ಥವಾಗಲಾರದೇ?" - ಈ ಆಶಂಕೆಗೆ ಸಮಾಧಾನವನ್ನು ಇಲ್ಲಿ ಹೇಳಿದೆ. " ತರತಿ ಶೋಕಂ ಆತ್ಮವಿತ್" ಎಂದು ಈ ಪ್ರಕರಣದ ಆರಂಭದಲ್ಲಿ ಹೇಳಿದ ಆತ್ಮತ್ವೋಪದೇಶವನ್ನು ಇಲ್ಲಿ ಭೂಮಾದೊಡನೆ ಸಮಜನ್ವಯಗೊಳಿಸಿ ಆತ್ಮಾದೇಶವನ್ನು ಉಪದೇಶಿಸಿದೆ. ಸರ್ವಾತ್ಮನೆಂದು ಯಾವ ಭೂಮಾವನ್ನು ಉಪದೇಶಿಸಿದೆಯೋ ಆ ಭೂಮಾ, " ಉಪಾಸಕನಿಗೂ

ಆತ್ಮನೇ" ಎಂದು ಅರ್ಥ. ಆದುದರಿಂದ ಅಹಂ ಶಬ್ದವೂ ಅಹಂ ಬುದ್ಧಿಯೂ ಯಥಾರ್ಥವೇ ಆದುದು ಎಂಬ ಭಾವ.

'ಆತ್ಮಾದೇಶ' ಎಂದು ಹೇಳಿರುವುದನ್ನು ಪ್ರಕೃತವಾದ ಭೂಮಕ್ಕೆ ಸಂಬಂಧಿಸಿದೆಯೆಂದು ಹೇಗೆ ಹೇಳಬಹುದು? ಬೇರೆಬೇರೆಯಾದ ಈ ಎರಡು ಉಪದೇಶಗಳೂ ಸಮಾನವಾಗಿ ಸರ್ವಾತ್ಮತ್ವವನ್ನೇ ಹೇಳಿರುವುದರಿಂದ ಈ ಎರಡು ಉಪದೇಶಗಳೂ ಒಂದೇ ವಿಷಯವನ್ನು ಕುರಿತದ್ದೆಂದು ಸಿದ್ಧವಾಗುತ್ತದೆ. ಹಾಗಾದರೆ "ಸ ಏವ ಅಧಸ್ತಾತ್" ಎಂದು ಭೂಮದ ಸರ್ವಾತ್ಮತ್ವವನ್ನು ಹೇಳಿದ ಮೇಲೆ ಮತ್ತೆ 'ಅಥಾತ ಆತ್ಮಾದೇಶಃ 'ಎಂದು ಹೇಳಿರುವುದು ವ್ಯರ್ಥವಾಗುವುದಿಲ್ಲವೇ? ಎಂದರೆ ಹೀಗೆ ಉತ್ತರಿಸಬಹುದು - " ಸ ಏವ ಇದಂ ಸರ್ವಂ" ಎಂಬುವ ಸಾಮಾನಾಧಿಕರಣ್ಯದಿಂದ ಆತ್ಮತ್ವವು ಫಲಿಸುತ್ತದೆ ಎಂಬುದು ನಿಜ. ಆದರೂ ಕಂಠೋಕ್ತವಾಗಿ ಉಪಾಸಕನ, ಆತ್ಮತ್ವಸಿದ್ಧಿಗಾಗಿ ನಿರ್ದಿಷ್ಟವಾಗಿ ಮತ್ತೆ ಉಪದೇಶ ಮಾಡಿದೆ.

"ಆತ್ಮರತಿಃ ಆತ್ಮಕ್ರೀಡಃ" ಇತ್ಯಾದಿ--ಶ್ರವಣ, ಮನನ ನಿದಿಧ್ಯಾಸನಗಳಿಂದ ಮೇಲೆ ಹೇಳಿದ ಭೂಮಾತ್ಮಸಾಕ್ಷಾತ್ಕಾರನಿಷ್ಠನಿಗೆ ಎಲ್ಲ ಬಗೆಯಾದ ಸುಖಾನುಭವವೂ ಆತ್ಮಸುಖಾನುಭವದಲ್ಲಿ ಅಂತರ್ಗತವಾಗಿದೆ ಎಂದು ಅರ್ಥ.

'ಸ್ವರಾಟ್'- ಎಂದರೆ ಅಕರ್ಮವಶ್ಯ; ಸ್ವಯಮೇವ ರಾಜಾ, ವಿಧಿ ನಿಷೇಧಗಳಿಗೆ ಕಿಂಕರನಾಗದವನು.

' ಅನ್ಯರಾಜಾನೋ ಭವನ್ತಿ' ಎಂದರೆ ವಿಧಿ ನಿಷೇಧ ಕಿಂಕರರಾಗುತ್ತಾರೆ ಅಥವಾ ಕರ್ಮವಶ್ಯರಾಗುತ್ತಾರೆ ಎಂಬ ಭಾವ.

ಇಪ್ಪತ್ತೈದನೆಯ ವಿಭಾಗ ಮುಗಿಯಿತು

• • •

ಇಪ್ಪತ್ತಾರ ನೆಯ ಖಂಡ

ತಸ್ಯ ಹ ವಾ ಏತಸ್ಯೈವಂ ಪಶ್ಯತ ಏವಂ ಮನ್ವಾನಸ್ಯೈವಂ ವಿಜಾನತ ಆತ್ಮತಃ ಪ್ರಾಣ ಆತ್ಮತ ಆಶಾऽऽತ್ಮತಃ ಸ್ಮರ ಆತ್ಮತ ಆಕಾಶ ಆತ್ಮತ ಸ್ತೇಜ ಆತ್ಮತ ಆಪ ಆತ್ಮತ ಆವಿರ್ಭಾವ ತಿರೋಭಾವಾವಾತ್ಮತೋऽನ್ನ ಮಾತ್ಮತೋ ಬಲಮಾತ್ಮತೋ ವಿಜ್ಞಾನಮಾತ್ಮತೋ ಧ್ಯಾನಮಾತ್ಮತಶ್ಚಿತ್ತ ಮಾತ್ಮತಃ ಸಂಕಲ್ಪಮಾತ್ಮತೋ ಮನ ಆತ್ಮತೋ ವಾಗಾತ್ಮತೋ ನಾಮಾऽऽತ್ಮತೋ ಮನ್ತ್ರಾ ಆತ್ಮತಃ ಕರ್ಮಾಣ್ಯಾತ್ಮತ ಏವೇದಗ್ಂ ಸರ್ವಮಿತಿ ॥ ೧ ॥

ಹೀಗೆ ಕಂಡುಕೊಂಡಿರುವ ಹೀಗೆ ಮನನ ಮಾಡಿರುವ, ಹೀಗೆ ಅರಿತುಕೊಂಡಿರುವ ಆತನಿಗೆ ಆತ್ಮನಿಂದಲೇ ಪ್ರಾಣವು, ಆತ್ಮನಿಂದಲೇ ಆಶೆ, ಆತ್ಮನಿಂದಲೇ ಸ್ಮರ, ಆತ್ಮನಿಂದಲೇ ಆಕಾಶ, ಆತ್ಮನಿಂದಲೇ ತೇಜಸ್ಸು, ಆತ್ಮನಿಂದಲೇ ಅಪ್ಪು, ಆತ್ಮನಿಂದಲೇ ಆವಿರ್ಭಾವ ತಿರೋಭಾವಗಳು, ಆತ್ಮನಿಂದಲೇ ಅನ್ನ, ಆತ್ಮನಿಂದಲೇ ಬಲ, ಆತ್ಮನಿಂದಲೇ ವಿಜ್ಞಾನ, ಆತ್ಮನಿಂದಲೇ ಧ್ಯಾನ, ಆತ್ಮನಿಂದಲೇ ಚಿತ್ತ, ಆತ್ಮನಿಂದಲೇ ಸಂಕಲ್ಪ, ಆತ್ಮನಿಂದಲೇ ಮನಸ್ಸು, ಆತ್ಮನಿಂದಲೇ ವಾಕ್ಕು, ಆತ್ಮನಿಂದಲೇ ನಾಮವು, ಆತ್ಮನಿಂದಲೇ ಮಂತ್ರಗಳು, ಆತ್ಮನಿಂದಲೇ ಕರ್ಮಗಳು, ಆತ್ಮನಿಂದಲೇ ಇವೆಲ್ಲವೂ.

ವಿ : ''ಅಥಾತ ಆತ್ಮಾದೇಶಃ'' ಎಂದು ಹೇಳಿದ ಉಪಾಸಕನ ಅಂತರ್ಯಾಮಿಗೆ ಚೇತನಾಚೇತನ ರೂಪವಾದ ಸಕಲ ಪ್ರಪಂಚಕ್ಕೂ ಉಪಾದಾನ ಕಾರಣತ್ವವನ್ನು ಹೊಂದಿರುವ ಸರ್ವಾತ್ಮಕತ್ವವನ್ನು ಇಲ್ಲಿ ಸ್ಪಷ್ಟಪಡಿಸಿದೆ. ಉಪಾಸಕನ ಅಂತರ್ಯಾಮಿಯೇ ಹಿಂದೆ ಅನೇಕ ಪರ್ಯಾಯಗಳಲ್ಲಿ ನಾಮಶಬ್ದದಿಂದ ಆರಂಭಿಸಿ ಜೀವಾತ್ಮಪರ್ಯನ್ತವಾಗಿ ಹೇಳಿದ ಸಕಲ ಪ್ರಪಂಚಕ್ಕೂ ಕಾರಣ. ಆದುದರಿಂದ "ಅಹಮೇವ ಇದಂ ಸರ್ವಂ" ಎಂದ ು ವಿಧಿ ಸಿರ ುವೆಅಹಂಗ್ರಹವು" ತಾತ್ತ್ವಿಕ ವಿಷ ಯವಾದ ುದೇ ಎಂಬ ಭಾವ.

ತದೇಷ ಶ್ಲೋಕೋ ನ ಪಶ್ಯೋ ಮೃತ್ಯುಂ ಪಶ್ಯತಿ ನ ರೋಗಂ ನೋತ ದುಃಖತಾಗ್ಂ ಸರ್ವಗ್ಂ ಹ ಪಶ್ಯಃ ಪಶ್ಯತಿ ಸರ್ವಮಾಪ್ನೋತಿ ಸರ್ವತ ಇತಿ ಸ ಏಕಧಾ ಭವತಿ ತ್ರಿಧಾ ಭವತಿ ಪಂಚಧಾ ಸಪ್ತಧಾ ನವಧಾ ಚೈವ ಪುನಶ್ಚೈಕಾದಶಃ ಸ್ಮೃತಃ ಶತಂ ಚ ದಶ ಚೈಕಶ್ಚ ಸಹಸ್ರಾಣಿ ಚ ವಿಗ್ಂಶತಿರಾಹಾರಶುದ್ಧೌ ಸತ್ತ್ವಶುದ್ಧಿಃ ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ ಸ್ಮೃತಿಲಂಭೇ ಸರ್ವಗ್ರನ್ಥೀನಾಂ ವಿಪ್ರಮೋಕ್ಷಸ್ತಸ್ಮೈ ಮೃದಿತಕಷಾಯಾಯ ತಮಸಸ್ಪಾರಂ ದರ್ಶಯತಿ ಭಗವಾನ್ಸನತ್ಕುಮಾರಸ್ತಗ್ಂ ಸ್ಕನ್ದ ಇತ್ಯಾಚಕ್ಷತೇ ತಗ್ಂ ಸ್ಕನ್ದ ಇತ್ಯಾಚಕ್ಷತೇ ॥ ೨ ॥

ಆ ವಿಷಯದಲ್ಲಿ ಈ ಶ್ಲೋಕವು ಪ್ರವೃತ್ತವಾಗಿದೆ. ಬ್ರಹ್ಮದರ್ಶಿಯು ಮರಣವನ್ನು ಕಾಣುವುದಿಲ್ಲ, ರೋಗವನ್ನು ಕಾಣುವುದಿಲ್ಲ, ದುಃಖಿತ್ವವನ್ನು ಕಾಣುವುದಿಲ್ಲ. ಸರ್ವವನ್ನೂ ಸಾಕ್ಷಾತ್ಕರಿಸುವವನಾಗಿ, ಎಲ್ಲವನ್ನೂ, ಎಲ್ಲ ಕಾಲದಲ್ಲಿಯೂ ಪಡೆದುಕೊಳ್ಳುತ್ತಾನೆ. ಅವನು ಒಂದು ಶರೀರವನ್ನು ಮೂರು ಶರೀರವನ್ನು ಏಳು ಶರೀರವನ್ನು ಒಂಭತ್ತು ಶರೀರವನ್ನು ಮತ್ತೆ ಹನ್ನೊಂದು ಶರೀರವನ್ನು ಹೊಂದುವನು. ನೂರು, ಹತ್ತು, ಒಂದು, ಸಾವಿರ, ಇಪ್ಪತ್ತು ಹೀಗೆ ಅನೇಕ ಶರೀರಿ ಎಂದು ಹೇಳಲ್ಪಟ್ಟಿದ್ದಾನೆ. ಆಹಾರ ಶುದ್ಧಿಯಾಗಲು ಸತ್ತ್ವಶುದ್ಧಿ, ಸತ್ತ್ವಶುದ್ಧಿಯಾಗಲು ಅವಿಚ್ಛಿನ್ನವಾದ ಆತ್ಮಧ್ಯಾನ, ಧ್ರುವವಾದ ಉಪಾಸನೆಯು ಲಭ್ಯವಾದರೆ ಎಲ್ಲಾ ಗ್ರಂಥಿಗಳ ಬಿಡುಗಡೆ. ಹೀಗೆ ದೋಷಗಳು ಪರಿಹಾರವಾದ ನಾರದರಿಗೆ ಭಗವಾನ್ ಸನತ್ಕುಮಾರರು ತಮಸ್ಸಿನ ಆಚೆಯ ದಡವನ್ನು ತೋರಿಸಿಕೊಡುತ್ತಾರೆ. ಆತನನ್ನು ಸ್ಕಂದನೆಂದು ಕರೆಯುತ್ತಾರೆ. ಸ್ಕಂದನೆಂದು ಕರೆಯುತ್ತಾರೆ.

ವಿ : "ಪಶ್ಯಃ" ಎಂದರೆ ಬ್ರಹ್ಮದರ್ಶಿ. ಬ್ರಹ್ಮದರ್ಶಿಯಾದವನು ಸಂಕಲ್ಪ ಮಾತ್ರದಿಂದ ತಾನು ಸಂಕಲ್ಪಿಸಿದ ಸರ್ವವನ್ನೂ ಎಲ್ಲ ಕಾಲದಲ್ಲಿಯೂ ಪಡೆದುಕೊಳ್ಳುತ್ತಾನೆ ಎಂಬ ಭಾವ. ಎಂದರೆ ಅಪಹತಪಾಪ್ಮತ್ವಾದಿ ಗುಣಾಷ್ಟಕಗಳ ಆವಿರ್ಭಾವವನ್ನು ಹೊಂದುತ್ತಾನೆ ಎಂದರ್ಥ.

"ಏಕದಾ ಭವತಿ - ಇತ್ಯಾದಿ" ಆತ್ಮನು ನಿರವಯವನಾದ ಕಾರಣ, ವಿಭಾಗದ ಯೋಗ ಇಲ್ಲ. ಆದುದರಿಂದ ಅವನ ಸತ್ಯ ಸಂಕಲ್ಪಕ್ಕನುಸಾರ ಅನೇಕ ವಿಧವಾದ ಶರೀರಗಳನ್ನು ಹೊಂದಿದವನಾಗುತ್ತಾನೆ ಎಂದರ್ಥ.

"ಆಹಾರಶುದ್ಧೌ"- ಸಾತ್ವಿಕಾಹಾರ ಸೇವನೆಯಿಂದ ಅಂತಃಕರಣದ ನೈರ್ಮಲ್ಯವು ಆಗುತ್ತದೆ. ಅಂತಃಕರಣವು ಶುದ್ಧವಾದಾಗ ಅವಿಚ್ಛಿನ್ನವಾದ ಸ್ಮೃತಿ ಸಂತಾನ ರೂಪವಾದ ಆತ್ಮಧ್ಯಾನ ಶಕ್ಯವಾಗುತ್ತದೆ. "ಗ್ರಂಥಿ" ಎಂದರೆ ಅವಿದ್ಯಾ, ರಾಗ, ಮೊದಲಾದವುಗಳು.

ಇಲ್ಲಿ "ಸ್ಮೃತಿಲಂಭೇ ಸರ್ವಗ್ರಂಥೀನಾಂ ವಿಪ್ರಮೋಕ್ಷಃ" ಎಂದು ಹೇಳಿರುವುದರಿಂದ ಈ ಸ್ಮೃತಿಗಿಂತ ಬೇರೆಯಾದ ದರ್ಶನದಿಂದ ಮೋಕ್ಷ ಎಂಬುದನ್ನು ತಳ್ಳಿಹಾಕಿದೆ. ದರ್ಶನಸಮಾನಾಕಾರವಾದ ಸ್ಮೃತಿ ಸಂತಾನದಿಂದಲೇ ಮೋಕ್ಷ.

ಹೀಗೆ ಶುದ್ಧಾನ್ತಃಕರಣನಾದ ನಾರದರಿಗೆ ಸನತ್ಕುಮಾರರು ಸಂಸಾರವೆಂಬ ಕತ್ತಲೆಯನ್ನು ಕಳೆಯುವ ಸೂರ್ಯನೂ ಅವಿಚ್ಛಿನ್ನವಾದ ಉಪಾಸನಕ್ಕೆ ಗೋಚರನಾದವನೂ ಆದ ಪರಮಾತ್ಮನನ್ನು ಸ್ಪಷ್ಟವಾಗಿ ಉಪದೇಶಿಸಿದರು. ಶಿಷ್ಯನ ಯೋಗ್ಯತೆಯನ್ನು ಪರೀಕ್ಷಿಸಿಯೇ ಆಚಾರ್ಯನು ಉಪದೇಶಿಸಿದನು ಎಂಬ ಭಾವ.

'ಸ್ಕಂದಃ'—ಹೇಗೆ ದೇವಸೇನಾನಿಯಾದ ಕುಮಾರಸ್ವಾಮಿಯು ಅಸುರರನ್ನು ನಾಶಪಡಿಸಿದನೋ ಹಾಗೆ ಬ್ರಹ್ಮೋಪಾಸಕರ ಸಾಧನೆಯ ಮಾರ್ಗದಲ್ಲಿ ಅಡ್ಡಿಯಾಗಿರುವ ಅಸುರೀಶಕ್ತಿಗಳನ್ನು ತನ್ನ ಅನುಗ್ರಹದಿಂದ ಶೋಷಿಸಬಲ್ಲವನು ಎಂಬ ಭಾವ. ಸಾಧಕನು ಆಚಾರ್ಯನ ಅನುಗ್ರಹ ದಿಂದಲೇ ಸಿದ್ಧಿಯನ್ನು ಹೊಂದಬಲ್ಲನಷ್ಟೇ?

ಇಷ್ಟೂತ್ತಾರನೆಯ ಖಂಡ ಮುಗಿದುದು
ಏಳನೆಯ ಪ್ರಪಾಠಕ ಮುಗಿದುದು

ಓಂ ಶಾಂತಿಃ ಶಾಂತಿಃ ಶಾಂತಿಃ